

ನೂಪುರ ಭ್ರಮರಿ
...ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಚಿಕೆಗಳಿಗೆ ಅನುದಾನವಿತ್ತವರು

# ಭಾರತೀಯ ಭಾಷಾ ಸಂಸ್ಥಾನ

## ಮಾನಸ ಗಂಗೋತ್ರಿ,

## ಮೈಸೂರು

Published with Financial Assistance from the Central Institute of Indian Languages

(Ministry of Human Resource Development, Department of Higher Education, Govt of India)

**Manasagangothri, Mysore-570006**

**Sanctioned vide letter 53-4(5)/2009-10/KAN/LM/GRNT dated June 18, 2010 Under the scheme of 'Grant in Aid'**



A Circumnavigation to the world of Dance and Performing Arts : A complete Journal

RNI No :KARKAN/2009/29752

ಮಾರ್ಗಶಿರ-ಪುಷ್ಯ 2010

ಸಂಚಿಕೆ : 6 ಸಂಪುಟ : 4

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

ಸಂಪಾದಕರು : ಮನೋರಮಾ ಬಿ.ಎನ್.

ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ವಾಜೆ

ವೆಬ್‌ಸೈಟ್ ನಿರ್ವಹಣೆ : ಮಹೇಶ್ ಎಳ್ಯಡ್ಕ,

ಧ್ಯೇಯ ಸಾಫ್ಟ್‌ವೇರ್ ಅಂಡ್ ಸೊಲ್ಯೂಷನ್ಸ್ , ಬೆಂಗಳೂರು.

ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್.

ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ

ಮುಖಪುಟ : ಪ್ರವೀಣ್ ಬಣಗಿ

## ಹೇಮಂತ ಋತು ಗಾನ

**ಅಂತರಂಗ.....**


- ಮಂಜೀರ........ 4
- ನರ್ತನ ಸುರಭಿ : ನೃತ್ಯ-ಅಂದು, ಇಂದು, ಮುಂದು........ 6
- ಲಲಿತ ಲಹರಿ : ಅಷ್ಟನಾಯಿಕೆಯರ ಚಿತ್ತವೃತ್ತಿ........ 8
- ಹಸ್ತ ಮಯೂರಿ : ಹಂಸಪಕ್ಷ ಹಸ್ತ........ 13
- ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ........ 16
- ರಂಗಸ್ಥಳ : ಹಳೆ ಕಲಾವಿದರುಗಳೆಂದರೆ ರೋಚಕ ಕಥೆಗಳ ತಾಣ ! ........ 19
- ಒಳನೋಟ........ 21
- ನಿಮ್ಮ ಬರೆಹ ನಮ್ಮ ಓದು........ 22
- ವರ್ಷದ ಶ್ರೇಷ್ಠ ನೃತ್ಯ ವಿಮರ್ಶೆ ಸ್ಪರ್ಧೆ........ 23
- ರಂಗ ಭ್ರಮರಿ........ 24


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ-ವಿವರ-ವಿಚಾರ-ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ **10**ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



# ಮಂಜೀರ

ಇಂದಿನ ಭರತನಾಟ್ಯ ಕಾರ್ಯಕ್ರಮಗಳ ನ್ನೊಮ್ಮೆ ನೋಡಿ. ಬಹುತೇಕ ನೃತ್ಯಬಂಧಗಳಲ್ಲಿ ಅದರಲ್ಲೂ ವರ್ಣ, ಪದ, ಅಷ್ಟಪದಿಗಳನ್ನು ಪ್ರಧಾನವಾಗಿ ಗಮನಿಸಿದರೆ ನೀವು ಕಾಣುವುದು ಮಧುರ ಭಕ್ತಿಯೆಂಬ ಶೃಂಗಾರವಲ್ಲದ ಶೃಂಗಾರವನ್ನೋ; ಅಥವಾ ವಿರಹೋತ್ಕಂಠಿತೆಯಾಗಿ ನೆಗೆಯುವ ನಾಯಿಕೆಯನ್ನು !

ಹಾಗೆ ನೋಡಿದರೆ ಭರತನಾಟ್ಯದಂತಹ ನೃತ್ಯಪ್ರಕಾರದಲ್ಲಿ ಭಕ್ತಿ ಶೃಂಗಾರ ವ್ಯಾಪಕವಾದದ್ದು 1930ರ ದಶಕದ ನಂತರ. ಸದಿರ್ ನೃತ್ಯ ಪ್ರಕಾರ ಅಳಿವಿನಂಚಿನಲ್ಲಿದ್ದಾಗ, ಸಮಾಜವು ಸದಿರ್ ಮತ್ತು ಶೃಂಗಾರವನ್ನು ಅನುಮಾನಾಸ್ಪದವಾಗಿ ನೋಡುತ್ತಿದ್ದಾಗ ನೃತ್ಯದ ಮರುಹುಟ್ಟಿಗೆ ರುಕ್ಮಿಣೀದೇವಿ ಪರಿಚಯಿಸಿದ ಮಧುರ ಭಕ್ತಿ ಪ್ರತಿಪಾದನೆ ಸದಿರ್‌ನ ಕೊಂಕು–ಕೊಳಕುಗಳನ್ನು ತೊಳೆದು ಭರತನಾಟ್ಯವಾಗಿ ಮಿಂಚುವಲ್ಲಿ ಒಂದು ಕಾಲಕ್ಕೆ ಕೊಡುಗೆಯಾದದ್ದು ನಜ.

ರುಕ್ಮಿಣೀ ಅವರ ಮಾತಿನಲ್ಲೇ ಹೇಳುವುದಾದರೆ 'ಶೃಂಗಾರಕ್ಕೆ ಪರ್ಯಾಯವಾಗಿ ರೂಪಿಸಿದ್ದು ಮಧುರ ಭಕ್ತಿಯನ್ನು. ಹಾಗೆಂದು ಶೃಂಗಾರ ಬೇಡವೆಂದಲ್ಲ ; ಬೇಕು. ಅದು ಅಗತ್ಯ ಕೂಡಾ ! ಆದರೆ ನಾನು ಅಭಿವ್ಯಕ್ತಿಸುವ ವಿಧಾನ ಉಳಿದವರಿಗಿಂತ ವಿಭಿನ್ನ ಮತ್ತು ಕೊಡುವ ಆಯಾಮ ಬೇರೆ.' ಅವರ ಪ್ರಕಾರ ಸದಿರ್‌ನಂತಹ ನೃತ್ಯದ ದಿಕ್ಕನ್ನು ಬದಲಾಯಿಸಿ, ದೇವದಾಸಿಗಳ ಕಪಿಮುಷ್ಟಿಯಿಂದ ಅದನ್ನು ಮುಕ್ತವಾಗಿ ಮಾಡಬೇಕಿದ್ದಲ್ಲಿ ಭಕ್ತಿಯನ್ನು ಶೃಂಗಾರದ ವಿರುದ್ಧ ಕಲ್ಪನೆಯೆಂಬಂತೆ ಬೆಳೆಸುವ ಅಗತ್ಯತೆ ಇತ್ತು. ಭಕ್ತಿಪೂರಿತ ಸಾಹಿತ್ಯವನ್ನೇ ಹೆಚ್ಚು ಎಂಬಂತೆ ತೋರುವುದರಿಂದ ನೃತ್ಯದ ಸತ್ತ್ವ ಮತ್ತು ಗೌರವ ಹೆಚ್ಚುತ್ತದೆ ಎಂಬುದು ಆಕೆಯ ವಾದ.

ಆದರೆ ಅಂದಿನ ಸಂಧಿಗ್ಧ ಕಾಲಕ್ಕೆ ಅಗತ್ಯವಿದ್ದ ಸುಧಾರಣೆಯು ಮತ್ತೊಮ್ಮೆ ಸುಧಾರಣೆಯಾಗಬೇಕಾದ ಅನಿವಾರ್ಯತೆಯನ್ನು ಹೊತ್ತು ನಿಂತಿರುವುದು ಇಂದಿನ ವಾಸ್ತವ, ಅಪಾಯ, ವಿಪರ್ಯಾಸ ಮತ್ತು ಅಚ್ಚರಿಯೊಂದಿಗಿನ ದೊಡ್ಡ ವಿಷಾದ. ಇಂದಿಗೆ ಯಾವುದೇ ವರ್ಣ, ಪದಂಗಳ ಅಭಿವ್ಯಕ್ತಿಯನ್ನು ನೋಡಿ, ಭಕ್ತಿ ಶೃಂಗಾರದಲ್ಲಿ ಭಕ್ತಿಯೂ ಇಲ್ಲ; ಶೃಂಗಾರವೂ ಇಲ್ಲ ಎಂಬಂತಾಗಿದೆ. ನೃತ್ಯದಲ್ಲಿ ಗೀತಗೋವಿಂದ ಅಷ್ಟಪದಿ, ಕ್ಷೇತ್ರಜ್ಞನ ಪದಗಳಾದಿಯಾಗಿ ಯಾವುದನ್ನೆಲ್ಲ ಮಧುರ ಭಕ್ತಿಗೆ ಎಂದು 'ಬ್ರಾಂಡ್' ಮಾಡಿದ್ದಾರೋ, ಅದೆಲ್ಲಕ್ಕೂ ಇರುವ ಶೃಂಗಾರವೆಂಬ ಮೂಲ ಧಾತುವನ್ನು ಕೀಳೆಂದು ಕಾಣುತ್ತಾ ಭಕ್ತಿಯನ್ನೇ ಬಂಡವಾಳವಾಗಿಸಿ ಅಲೌಕಿಕವನ್ನು ಮುಟ್ಟಲು ಹೆಣಗುತ್ತಿದ್ದಾರೆ. ಶೃಂಗಾರದ ಅವಸ್ಥೆಗಳಿಗಿಂತ, ಭಕ್ತಿ ಶೃಂಗಾರವೇ ಉನ್ನತವಾದದ್ದು ಎಂಬ ಧೋರಣೆಯಲ್ಲೇ 'ಶಕ್ತಿಪ್ರದರ್ಶನ'ಕ್ಕೆ ಸಜ್ಜಾಗುತ್ತಿದ್ದಾರೆ. ಅಂಧಾನುಕರಣೆಯೋ ಅಥವಾ ಔದಾಸೀನ್ಯವೋ; ನಾಟ್ಯಶಾಸ್ತ್ರದ ಮೂಲ ವ್ಯಾಖ್ಯೆಗಳನ್ನೇ ಮರೆತು, ಭಕ್ತಿಯನ್ನೇ 'ಶೃಂಗಾರಶಾಸ್ತ್ರ'ವೆಂಬ ಹಣೆಪಟ್ಟಿ ಕಟ್ಟಿಸಿಕೊಂಡು ಭರತನಾಟ್ಯದ ಥಿಯರಿಯಲ್ಲಷ್ಟೇ ಶೃಂಗಾರವನ್ನು ಕಾಣುತ್ತಾ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತೆ ಅಕ್ಷರಶಃ ಅಸ್ಪೃಶ್ಯನನ್ನಾಗಿಸಿದ್ದಾರೆ !

ಹಾಗೆ ನೋಡಿದರೆ ಭಕ್ತಿಯೆಂಬ ಕಲ್ಪನೆಯನ್ನು ವಿದ್ವಾಂಸರು, ಲಾಕ್ಷಣಿಕರು ರಸವೆಂದು ಪ್ರತಿಪಾದಿಸಿದರೂ ಅದನ್ನು ಅಲ್ಲಗಳೆದವರೇ ಹೆಚ್ಚು. ಭಕ್ತಿ ಮುಂತಾದ ಭಾವಗಳು ರಸತ್ವವನ್ನು ಪಡೆಯಬಲ್ಲುದು ಎಂದು ಭೋಜರಾಜ ತನ್ನ ಶೃಂಗಾರ ಪ್ರಕಾಶ, ಸರಸ್ವತೀ ಕಂಠಾಭರಣದಲ್ಲಿ ಹೇಳಿದರೂ ಅಭಿನವ ಗುಪ್ತ ಮೊದಲಾದವರು ಅದನ್ನೊಪ್ಪುವುದಿಲ್ಲ. ಯಾವುದು ಸಹಜವೋ ಅದು ರಸ. ಯಾವುದು ಮತ್ತೊಂದರ ಜನ್ಯವೋ ಅದು ರಸವಾಗಲಾರದು ; ರಸದೃಷ್ಟಿಯ ಆಳಕ್ಕಿಳಿದು ಗಮನಿಸಿದರೆ ಎಂದೆಂದಿಗೂ ನಮಗೆ ಕಾಣುವುದು ಪ್ರಮುಖವಾಗಿ ಸಂಭೋಗಶೃಂಗಾರ ಮತ್ತು ವಿಪ್ರಲಂಭಶೃಂಗಾರ ಎಂಬ ಎರಡು ಬಗೆ ಮಾತ್ರ ; ಹಾಗಾಗಿ ಮಧುರ ಭಕ್ತಿಯೆಂಬುದು ನೇರ ಹಾದಿಯಿಂದ ಬರದೆ, ಬಯಲುಹಾದಿಯಲ್ಲಿ ಇರದೆ, ಒಳಹಾದಿಗಳಿಂದ ಬಂದ ಒಂದು ಉತ್ಪನ್ನ ಎಂಬುದು ಅವರ ವಾದ.

ಭಕ್ತಿಯನ್ನು ಅನುಭವದ ನಿಟ್ಟಿನಲ್ಲಿ ನೋಡಿದಾಗ ಅದು ಭಗವದ್ವಿಷಯವಾದ ಪ್ರೀತಿ. ಯಾವುದೇ ವಸ್ತುವನ್ನು ದೊಡ್ಡದಾಗಿ ಗೌರವಿಸಿ ಪ್ರದರ್ಶಿಸುವುದು ಭಕ್ತಿ. ಮನುಷ್ಯ, ಪ್ರಾಣಿ, ಪರಿಸರದ ಬಗ್ಗೆಯೂ ಇದನ್ನು ತೋರಿಸಬಹುದು. ತಂದೆ, ತಾಯಿ, ಗಂಡ, ಹೆಂಡತಿ..ಹೀಗೆ ಲೌಕಿಕವಾಗಿಯೂ ಇರಬಹುದು. ಈಗ 'ದೇಶಭಕ್ತಿ'ಯ ಪರಿಕಲ್ಪನೆಯೂ ಸೇರಿಕೊಂಡಿದೆ. ಆದರೆ ಲಿಂಗಕ್ಕೂ ಮೀರಿದ ಭಾವಸರ್ವಸ್ವ ಶೃಂಗಾರ. ಅದು ಕೇವಲ ಅಲಂಕಾರ, ಒನಪು, ಒಯ್ಯಾರ

ಮಾತ್ರವಲ್ಲ, ಸಮರ್ಪಣೆಯ ಶೃಂಗ. ಅಲ್ಲಿ ದೇವರಾಗಲಿ ಅಥವಾ ಯಾವುದೇ ಆಗಲಿ ಅದು ಪ್ರೀತಿಯ ಅಗಾಧ ಸಾಧ್ಯತೆ. ಎಲ್ಲಾ ಹಂಗನ್ನು ತೊರೆದು, ತನ್ನದು ಎನ್ನುವ ಪ್ರತ್ಯೇಕತೆಯನ್ನು ಕಳಚಿ ಜೀವಾತ್ಮ ಪರಮಾತ್ಮ–ಎಲ್ಲವೂ ಒಂದೇ ಆಗಿ ಒಂದರೊಳಗೊಂದು ಸಮೃದ್ಧವಾಗಿ ಸೇರಿಕೊಳ್ಳುವ ಅದ್ಭುತ ಪರಿಕಲ್ಪನೆ.

ಹಾಗಾಗಿಯೇ ಸರ್ವ ರಸಗಳಲ್ಲಿಯೂ ಶೃಂಗಾರಕ್ಕೇ ಮೊದಲ ಸ್ಥಾನ. ಉಳಿದೆಲ್ಲಾ ರಸಗಳೂ ಶೃಂಗಾರದ ವಿಭಾಗಗಳಷ್ಟೇ! ಶುದ್ಧ ಶೃಂಗಾರ ಭಕ್ತಿಗಿಂತ ಮೇಲ್ಮಟ್ಟದ್ದು, ಭಕ್ತಿಯು ಶೃಂಗಾರದ ಸಾಧನಾ ಹಂತದ ಒಂದು ದಾರಿಯಷ್ಟೇ ಹೊರತು ಐಕ್ಯವನ್ನು ಸಾಧಿಸುವ ಅಂಶವಲ್ಲ ; ಭಕ್ತಿ ಭಾವ ಶೃಂಗಾರ ಮಾಧ್ಯಮದ ಮೂಲಕ ವ್ಯಕ್ತವಾಗಿ, ಅದಕ್ಕೆ ತಕ್ಕ ದೇಹ ಚಲನೆಗಳೂ ಮೂಡಿಬಂದಾಗ ಅದನ್ನು ಮಧುರಭಕ್ತಿಯೆಂದು ಕರೆದು ಶೃಂಗಾರದ ಒಳಗೆ ಸೇರಿಸಬಹುದಾದರೂ ; ಶೃಂಗಾರದ ಪರಮ ತತ್ತ್ವಕ್ಕಿಂತ ಮೇಲಲ್ಲ ಎಂಬುದು ಲಾಕ್ಷಣಿಕರ ಅಭಿಮತ. ಸರಳವಾಗಿ ಉದಾಹರಿಸುವುದಾದರೆ ಭಜನೆಯೇ ಭಕ್ತಿಯಲ್ಲ. ಭಜನೆಗಿಂತಲೂ ಮುಂದಿನದು ಅದರೊಳಗಿನ ಸಮರ್ಪಣಾ ಭಾವ. ಆದರೆ ಭಜನೆಯ ಭಕ್ತಿಯನ್ನೇ ಎಲ್ಲವೂ ಅಂದುಕೊಂಡಿರುವ ಪರಿಸ್ಥಿತಿ ಇಂದಿನ ಭರತನಾಟ್ಯ ಕಲಾವಿದರದ್ದು!

ಹಾಗಂತ ಕಲೆಯನ್ನು ದೈವಿಕವಾಗಿ ಬಿಂಬಿಸುವುದು, ಅದಕ್ಕೆ ಭಕ್ತಿಯನ್ನು ಬಳಸುವುದು ಕಲೆಯ ಅಸ್ತಿತ್ವದ ದೃಷ್ಟಿಯಿಂದ ಒಂದು ಹಂತಕ್ಕೆ ಔಚಿತ್ಯ, ಅಗತ್ಯ ಮತ್ತು ಅನಿವಾರ್ಯವೂ ಹೌದು. ಆದರೆ ಕಲಾವಿದರು ಭಕ್ತಿಯನ್ನು ಅರ್ಥವಿಲ್ಲದ ಮಡಿವಂತಿಕೆಯ ಚೌಕಟ್ಟು ಹಾಕಿ ಕೂರಿಸಿ, 'ಉಳಿಸಿಕೊಂಡದ್ದು ಹೇಗಾದರೂ ದಕ್ಕಬೇಕು' ಎಂಬ ಒಂದು ಬಗೆಯ ಮೀಸಲಾತಿ, ಪ್ರತ್ಯೇಕತೆಯ ಆಗ್ರಹವನ್ನಷ್ಟೆ ಕಟ್ಟಿಕೊಂಡು ತಿರುಗುತ್ತಾ ; ತಮ್ಮ 'ಬ್ರಾಂಡ್'ಗಳನ್ನು ರಸದೃಷ್ಟಿಗೆ ಒಯ್ಯಲು ಆಗದೇ ಇದ್ದರೂ; ರಸಿಕನಿಗೆ ಯಾವ ಬಗೆಯ ಸಂವಹನ ಆಗದೇ ಹೋದರೂ 'ತಮ್ಮದು ಶಾಸ್ತ್ರೀಯ, ಹಾಗಾಗಿ ಅರ್ಥವಾಗುವುದಿಲ್ಲ' ಎಂಬ ವಿತಂಡ ವಾದವನ್ನು ಮಾಡುತ್ತಲೇಯಿದ್ದಾರೆ ! ಹೀಗೆ ಕಲಾವಿದರು ತಮ್ಮ ಯೋಗ್ಯತೆ–ಪ್ರತಿಭೆಯನ್ನು ಪರಿಗಣಿಸದೇ ಕೇವಲ ವಸ್ತುವಿನಲ್ಲಷ್ಟೆ ಯೋಗ್ಯತೆಯಿದೆ ಎಂಬ ಅಜ್ಞಾನ ಪ್ರದರ್ಶಿಸಿದರೆ ಆಗುವ ಪರಿಣಾಮ, ಕಲೆಯ ಕೊಲೆ !

ಒಟ್ಟಿನಲ್ಲಿ ಇಂದಿನ ಭರತನಾಟ್ಯವು ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳಲು ಎಷ್ಟು ಬೇಕೋ ಅದಕ್ಕಿಂತ ಹೆಚ್ಚಿನದ್ದು ಕಲಿತಿದೆ. ಆದರೆ ಲೌಕಿಕದಿಂದ ಪಾರಮಾರ್ಥಿಕ ಸಂವಹನಕ್ಕೆ ದಾರಿಯಾದ ಶೃಂಗಾರವನ್ನು 'ಕೇವಲ ಕಾಮ'ವೆಂಬಂತೆ ಅಸ್ಪೃಶ್ಯವಾಗಿ ಕಾಣುತ್ತಿರುವುದು, ಪ್ರೇಕ್ಷಕನ ರಸಾನುಭವಕ್ಕಾಗಿ ಅನುಸರಿಸಲೇಬೇಕಾದ ಕರ್ತವ್ಯವನ್ನು ಮರೆತು ರಸಿಕ ಪಡೆಯಲೇಬೇಕಾದ ಹಕ್ಕನ್ನು ವಂಚಿಸುತ್ತಿರುವುದು ಜಾಣತನವಲ್ಲ ; ಬದಲಾಗಿ ತನಗೆ ತಾನೇ ಮಾಡಿಕೊಳ್ಳುತ್ತಿರುವ ಮೋಸ. ಅನುಭಾವಿಕ ಪ್ರಜ್ಞೆಯೊಳಗೆ ಒಂದಾಗಿ ನಲಿಯುವುದು ಕೈಗೆಟುಕದ ದ್ರಾಕ್ಷಿಯಂತಾದಾಗ ನಾವು ಕಟ್ಟುವ ಭಕ್ತಿಶೃಂಗಾರವೆಂಬ ರಕ್ಷಣಾ ತಡೆಗೋಡೆಯು ರಸದಿಂದ, ಅಂತಃಸತ್ತ್ವಕ್ಕೆ ಇಡುವ ಸವಾಲಿನಿಂದ ವಿಮುಖವಾಗುವ ಪಲಾಯನವಾದವಲ್ಲದೆ ಬೇರೇನಲ್ಲ.

ಕಲೆಯ ಅತ್ಯುಚ್ಚ ಮಟ್ಟದಲ್ಲಿ ಯಾವುದೇ ಆದರೂ ಸಾರ್ವಜನೀನವಾಗಿರುವುದು ರಸ; ಇಲ್ಲವಾದರೆ ಅದು ಮಡಿಯೆಂಬ 'ನೀರಸ'. ರಸವಿಹೀನವಾದರೆ ಶಾಸ್ತ್ರೀಯ ನೃತ್ಯವಾದರೂ ಅದು ಯಾವ ಪ್ರಯೋಜನಕ್ಕೂ ಇಲ್ಲ. ಆದರೆ ನಮ್ಮೊಳಗಿನ ನಿರ್ಜೀವ ಮನಸ್ಸು, ಸ್ವಹಿತಾಸಕ್ತಿ, ಅಂಧತ್ವ, ಜಡತ್ವಗಳಿಗೆ ಸಾಕ್ಷಿಯಾಗಿ ಮಡಿವಂತಿಕೆಯ ಸೋಗನ್ನು ಮುಂದುವರೆಸಿಕೊಂಡು ಹೋದರೆ ಮುಂದೊಮ್ಮೆ ಕೊನೆಯ ಸಾಲಿನಲ್ಲಿ ನಿಲ್ಲುವ ಅರ್ಹತೆಯೂ ಕಡಿದು ಹೋಗಬಹುದು. ಕಾಲ ಮತ್ತು ಕಲೆ ಬಯಸುವ ಶೃಂಗಾರರಸದೃಷ್ಟಿ ಆಯಾಯ ಹಂತಕ್ಕೆ ದೊರಕದೇ; ನೃತ್ಯದ ಒಂದು ಕಾಲದ ಪುನರುಜ್ಜೀವನಕ್ಕೆ ಹಾದಿಯಾದ ಭಕ್ತಿಯನ್ನೇ ಸತತವಾಗಿ ಪರ್ಯಾಯಶಕ್ತಿಯೆಂಬಂತೆ ಬಳಸುತ್ತಾ ಹೋದರೆ ಆಡು ಕೂಡಾ ಮುಟ್ಟದೆ ಹೋಗುವ ಆಡುಸೋಗೆಯಂತೆ ಭರತನಾಟ್ಯವನ್ನು ಕಲಾ ಅಸ್ಪೃಶ್ಯತೆ ಕಾಡೀತು! ನಮ್ಮ ಅತಿಯಾದ ಮಡಿ ನಮ್ಮನ್ನೇ ಎಲ್ಲರಿಂದ ದೂರವಿಟ್ಟೀತು! ಎಚ್ಚರವಿರಲಿ, ಅತಿಯಾದರೆ ಅಮೃತವೂ ವಿಷ !

ಪ್ರೀತಿಯಿಂದ

**ಸಂಪಾದಕರು**



## ನರ್ತನ ಸುರಭಿ

* ನಾಟ್ಯಾಚಾರ್ಯ ಕೆ. ಮುರಲೀಧರ ರಾವ್

# ನೃತ್ಯ : ಅಂದು, ಇಂದು, ಮುಂದು

ಭರತನಾಟ್ಯವನ್ನು ಕಾಣುವ ಜನಸ್ತೋಮ ಹೆಚ್ಚಿದೆ. ಅದಕ್ಕೆ ತಕ್ಕಂತೆ ಕಲೆ ಇಂದು ಕುಲಗೆಟ್ಟು ನಡೆಯುತ್ತಿದೆ. ನಾಟ್ಯದ ರೂಪು ವಿನ್ಯಾಸಗಳೆಲ್ಲಾ ಜನರಲ್ಲಿ ನಾನಾ ಭಾವನೆಗಳನ್ನು ಕೆರಳಿಸಿದೆ. ಇದಕ್ಕೆ ಕಾರಣರು ಯಾರು? ಹಣವಂತರೇ? ನರ್ತಿಸುವ ಬಾಲಕಿಯರೇ? ದುಡ್ಡಿನ ಮದವೇ? ಗುರುಗಳೆನಿಸಿ ಕೊಂಡವರ ಲೋಭವೇ? ಹೊಸ ಸೋಗಿನಲ್ಲಿ ನಮ್ಮೆದುರು ಅತಿ ಬುದ್ಧಿವಂತರಾಗಿ ನಿಂತು ಅಪಾರ, ಸಮೃದ್ಧ ಅರಿವು ಪಡೆದುಕೊಂಡಂತಿರುವ ಮಂದಿಯೇ? ಅಥವಾ ವಿಮರ್ಶಿಸುವವರ ಧೈರ್ಯ ಸಾಲದ ಅವಸ್ಥೆಯೇ?

ಕಲಿಯಲು ಬಂದ ಒಬ್ಬ ವಿದ್ಯಾರ್ಥಿಗೆ ಪ್ರಥಮವಾಗಿ ಹೇಳಿಕೊಡುವ ವಿದ್ಯೆ ಎಂದರೆ 'ನಿನ್ನ ಅರಂಗೇಟ್ರಂ ಮಾಡಿಸುವುದು ನನ್ನ ಉದ್ದೇಶ' ! ನೀರಿನಂತೆ ವೆಚ್ಚ ಮಾಡಲು ಹಣ ಕೈಯ್ಯಲ್ಲಿರುವಾಗ ಪೋಷಕರದ್ದೂ ಅದೇ ಆಶೆ. ಹೇಳಿಕೇಳಿದ ಫೀಸು ಕೊಟ್ಟು ಮಕ್ಕಳನ್ನು ಕಳುಹಿಸಿಕೊಟ್ಟರೆ 'ಯಾರದೇನು ಗಂಟು ಹೋಯಿತು' ಎಂಬ ಚಪಲ ಮಾತು ಹೆತ್ತವರದು. 'ಅಮೂಲ್ಯ ಮಕ್ಕಳನ್ನು ಪಡೆದಿದ್ದೇನೆ' ಮತ್ತು ತನ್ನ ಅಂತಸ್ತನ್ನು ತೋರಿಸುವ ಛಲ ಅವರಿಗೆ. ಹೀಗಿದ್ದಾಗ ಅವರ ದೃಷ್ಟಿಗೆ ಬೀಳುವ ವ್ಯಕ್ತಿಗಳು ಮತ್ತು ಅಂತಹುದೇ ಸಂದರ್ಭವನ್ನು ಕಾಯುವವರು ನರ್ತಕಶಿಕ್ಷಕರು. ತಯಾರು ಮಾಡುವವನಿಗೆ ಒಂದು ಅನಿರೀಕ್ಷಿತ ದುಡ್ಡಿನ ಹುತ್ತವಾದರೆ ; ತಮ್ಮ ಚಿಕ್ಕಮಕ್ಕಳು ಕುಣಿಯುವಾಗ ಹತ್ತು ಜನ ಯೋಗ್ಯರು (?) ಕುಳಿತು ನೋಡುವುದೇ ಪೋಷಕರಿಗೆ ಹಬ್ಬ. ಕೊನೆಗೆ ಅರಂಗೇಟ್ರಂನ ನರ್ತಕಿ ಕಲಿತದ್ದು ಕೇವಲ ಹುಡುಗಾಟವನ್ನು ಮಾತ್ರ ಎಂಬಂತಾಗುತ್ತದೆ.

ಅರಂಗೇಟ್ರಂ ಆದಿಯಾಗಿ ಇಂದಿನ ಕಾರ್ಯಕ್ರಮಗಳು ದೃಶ್ಯದಲ್ಲಿ ನಡೆವ ಕಲಾ 'ಸಂಪತ್ತು'. ಅದೂ ಅಲ್ಲದೆ ಭರತನಾಟ್ಯದ ಜೊತೆಗೆ ಕಾಣಲು ಅಸಾಧ್ಯವಾದ ಕೂಚಿಪುಡಿ, ಕಥಕ್, ಮೋಹಿಯಾಟ್ಟಂ... ಹೀಗೆ ಇನ್ನೂ ಅನೇಕ ಬೇರೆ ಬೇರೆ ಶೈಲಿಗಳು. (ಅವು ಯಾವುದೆನ್ನಲು ನಮಗೆ ಸಾಧ್ಯವಿಲ್ಲ.) ಇದಕ್ಕೆ ಸಲುವ ಯೋಗ್ಯ(?) ಸಂಗೀತಗಾರರು. ನೃತ್ಯದ ಒಂದೇ ಒಂದು ಬಗೆಯೂ ಅಸಮ್ಮತ, ಅಸಮರ್ಥವಾದರೂ; ಕೊನೆಯಲ್ಲಿ ಅವರೆಲ್ಲರ ಮುಗುಳುನಗೆ ಒಂದೇ ನಮಗೆ ಕಾಣಿಸುವುದು. ಬಹುಷಃ 'ದುಡ್ಡು ಕೈಗೆ ಬಂತಲ್ಲ' ಎಂಬ ಭಾವವೇ ಇರಬೇಕು !

ಇನ್ನು ಮುಂದಾದರೂ 'ಅರಂಗೇಟ್ರಂ' ಎಂಬ ಶಬ್ದಕ್ಕೆ ಜಾಗರೂಕರಾಗಿರಬೇಕು. ಅಲ್ಲಿ ರಂಗಸ್ಥಳದಲ್ಲಿ ಇದ್ದಾರೆ ದುಡ್ಡು ಬಾಚುವ ಮಹಾಮಹಿಮರು !

ಒಟ್ಟಿನಲ್ಲಿ ಕಲೆಯನ್ನೇ ಮಾರಾಟಕ್ಕಿಡುವ ಸನ್ನಿವೇಶದಲ್ಲಿ ನಿಜವಾಗಿ ಕಲಿಯಲು ಬಂದ ಬಾಲಕಿಯರು ಈ ಮಾರ್ಕೆಟ್ಟಿನಲ್ಲಿ ಏನನ್ನು ತಾನೇ ಕಲಿಯುತ್ತಾರೆ? ಫ್ಯಾಕ್ಟರಿಯಲ್ಲಿ ಹುಟ್ಟಿಕೊಂಡಂತೆ ಗುರುಗಳು (?) ಹುಟ್ಟಿಕೊಳ್ಳುವಾಗ ಅವರಿಗೆ ತಕ್ಕಂತೆ ಕಾರ್ಯಕ್ರಮ ನಡೆಯುವುದು ಅನೂಚಾನ ಪದ್ಧತಿ.

ಇಂತಹ ದೃಶ್ಯಗಳನ್ನು ಹಲವು ಬಾರಿ ಹಲವು ವರ್ಷಗಳಿಂದ ನೋಡುತ್ತಾ ಬಂದಿದ್ದೇವೆ. ಜೊತೆಗೆ ಈ ಸಮಾರಂಭಗಳನ್ನು ಹಿಂಬಾಲಿಸಿ ಬರುವವರು ನರ್ತಕರೆಂಬ ಹಣೆಪಟ್ಟಿಗೆ ಸೇರಿಸಿಕೊಳ್ಳದೆ ಪಂಡಿತ(?)ರೆನಿಸಿಕೊಳ್ಳುತ್ತಾರೆ. ಅವರ ಹಿಂದಿನಿಂದ ಕಾಣಿಸುವವರು ಸಾಮಾನ್ಯ ಜನರು. ಮುಂದಿರುವುದು ಯಂತ್ರದಂತೆ ಸಾಗುವ ನಾಟ್ಯಾಂಗ ಮತ್ತು ಮನಸ್ಸಿಗೆ ಎಟುಕದ ಭಾವಾವೇಗ. ಕಲೆ ಎಂತಹ ಪ್ರಕಾರದ್ದು ಎಂಬ ಉದ್ದೇಶವಿರದೆ ಅದನ್ನು ಸಿಕ್ಕಾಪಟ್ಟೆ ಹೊಗಳುವ ಮತ್ತು ಹೊಗಳಿಸಿಕೊಳ್ಳುವ ಅತಿರೇಕದ ಅವಿವೇಕ ಬುದ್ಧಿ. ಆದರೆ ಎದುರು ನಿಲ್ಲುವವರು ಯಾರೂ ಇಲ್ಲ. ಬಹುಷಃ ಆತ್ಮರಕ್ಷಣೆಗೋ ಏನೋ !

ಪರಿಣಾಮ ; ಯೋಗ್ಯ ಸಭಾಸದರು ತಾವಾಗಿ ಕಡಿಮೆಯಾಗುತ್ತಾರೆ. ಅಲ್ಲದೆ ಈ ಲೋಪಗಳೇ ಕಲೆಗೆ ಆಪತ್ತನ್ನು ತರುತ್ತದೆ.

✻

**ನಿಮಗಿಷ್ಟವಾದ ಹಿರಿ–ಕಿರಿಯ ಕಲಾವಿದ ಅಥವಾ ಕಲಾವಿದೆಯ ಸೊಗಸು, ಕೊಡುಗೆ, ಮಾದರಿ, ವಿಶೇಷತೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸುತ್ತಿದೆಯೇ? ಹಾಗಿದ್ದರೆ ತಡವೇಕೆ. ನೂಪುರ ಭ್ರಮರಿಯ 'ಲೋಕ ಭ್ರಮರಿ' ಅಂಕಣಕ್ಕೆ ಬರೆಯಿರಿ; ಅಂಕಣವನ್ನು ಸಮೃದ್ಧಗೊಳಿಸಿ. ನೃತ್ಯ ಕ್ಷೇತ್ರದಲ್ಲಿ ಒಳ್ಳೆಯ ಭವಿಷ್ಯ ಹೊಂದಿರುವ /ಹೊಂದಲಿರುವ, ಭರತನಾಟ್ಯ, ಯಕ್ಷಗಾನ, ಒಡಿಸ್ಸಿ, ಕಥಕ್, ಮಣಿಪುರಿ, ಕೂಚಿಪುಡಿ, ಮೋಹಿನಿಯಾಟ್ಟಂ, ಕಥಕಳಿಯಾದಿಯಾಗಿ ಶಾಸ್ತ್ರೀಯ, ಜನಪದ ನರ್ತನ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿರುವ ನೀವಿಷ್ಟಪಡುವ ಕಲಾವಿದರ ಪರಿಚಯ, ಮಾಹಿತಿ, ನಿಮಗಿಷ್ಟವಾದ ಪಾತ್ರ–ಸನ್ನಿವೇಶ–ಘಟನೆಗಳನ್ನು ಬರೆದು ಕಳಿಸಿ. ತಕ್ಕುದಾದ ಫೋಟೋವಿದ್ದರೆ ಸೂಕ್ತ. ಆದರೊಂದು ವಿನಂತಿ. ವೈಭೋಗದ ಅತಿರಂಜಿತ ವರ್ಣನೆಗಳು, ರಂಗಪ್ರವೇಶ ಅಥವಾ ಇನ್ನಿತರ ಪರಿಚಯ ಕಾರ್ಯಕ್ರಮಗಳ ಆಡಂಬರದ ಮಾಹಿತಿಗಳು ಬೇಡ. ಬರೆದು ಕಳಿಸುತ್ತೀರಲ್ಲಾ ! ಆ ಮೂಲಕ ನರ್ತನ ಕ್ಷೇತ್ರದ ಕಲಾವಿದರನ್ನು ಮತ್ತಷ್ಟು ಸಮೀಪಿಸೋಣ.**

**ಸಂಚಿಕೆಗಾಗಿ ಸಹಕರಿಸಿದವರು**

**ಶ್ರೀ ದತ್ತಾತ್ರೇಯ ಹೊಸಬಾಳೆ**

ಹಿರಿಯ ಸಾಮಾಜಿಕ ಕಾರ್ಯಕರ್ತರು, ಪಾಟ್ನಾ

# ಲಲಿತ ಲಹರಿ

## ಅಷ್ಟನಾಯಿಕಾ ಚಿತ್ತವೃತ್ತಿ

ಲಲಿತಲಹರಿಯ ಮೂಲಕ ಮನೋಜ್ಞವಾದ, ಅಪೂರ್ವವೆನಿಸುವ ನೃತ್ಯಸಂಬಂಧೀ ಕನ್ನಡ ಭಾಷಾ ರಚನೆಗಳನ್ನು ಹಲವು ಸಂಚಿಕೆಗಳಿಂದ ಓದಿಕೊಂಡು ಬಂದಿದ್ದೀರಿ. ಈಗ ಅವೆಲ್ಲದಕ್ಕೂ ಕಳಶಪ್ರಾಯವಾಗಿ ನೃತ್ಯ–ನಾಟ್ಯಾದಿ ವರ್ಗಗಳಲ್ಲಿ ಸಾರ್ವಕಾಲೀನವೆನಿಸುವ, ಅಭಿವ್ಯಕ್ತಿಗೆ ಸವಾಲು ಮತ್ತು ಸಾಧನವೆನಿಸುವ ಅಷ್ಟನಾಯಿಕೆಯರ ಚಿತ್ತವೃತ್ತಿಗಳನ್ನು ಬಗೆಬಗೆಯಾಗಿ ಹರಡಿ ಅದರ ಅಂದಚೆಂದಗಳನ್ನು ಕಾಣಿಸುವ ಪ್ರಯತ್ನ ಈ ಸಂಚಿಕೆಯಿಂದ ಪ್ರಾರಂಭಗೊಳ್ಳಲಿದೆ. ಆ ಮೂಲಕವಾಗಿ ನಾಟ್ಯಾಭಿವ್ಯಕ್ತಿಗೆ ಕಲಾವಿದರಿಗೆ ಪ್ರೇರಣೆ ಮತ್ತು ಪೋಷಣೆಯನ್ನು ನೀಡುವುದರೊಂದಿಗೆ ಓದುಗರ ನಡುವೆ ಸಂವಾದ, ಅರಿವಿನ ಹರಿವಿಗೆ ಮತ್ತಷ್ಟು ಅವಕಾಶವಾಗುವುದೆಂಬ ನಂಬುಗೆ ನಮ್ಮದು. ಇದನ್ನು ಸೂಕ್ತವಾಗಿ ಕಂಡುಕೊಂಡಲ್ಲಿ ರಸಿಕವರ್ಗಕ್ಕೆ ರಸದೃಷ್ಟಿ, ಕಲ್ಪನಾವಕಾಶ, ಭಾವಾಭಿನಯ ಸಾಮರ್ಥ್ಯ, ರಸಪ್ರತಿಪಾದನೆಯ ಕ್ಷಿತಿಜ ಮತ್ತಷ್ಟು ವಿಸ್ತಾರವಾಗಿ ಕಾಣುವುದರಲ್ಲಿ ಸಂಶಯವಿಲ್ಲ ಎಂದು ವಿದ್ವಜ್ಜನರ ಅನಿಸಿಕೆ.

ವರ್ಷಾದ್ಯಂತ ಒಂದೊಂದು ಸಂಚಿಕೆಗೂ ಒಬ್ಬೊಬ್ಬ ನಾಯಿಕೆಯ ಸಂಕ್ಷಿಪ್ತ ಪರಿಚಯ, ಅದರ ಕುರಿತ ಕಾವ್ಯ ದೃಷ್ಟಿ, ಅನುಭವ–ಅನುಭಾವ ನೆಲೆಗಟ್ಟನ್ನು ಪರಿಚಯಿಸುವ, ಅಭಿನಯಕ್ಕೆ ಪೂರಕವಾದ ವಿಶ್ಲೇಷಣೆ, ಯಕ್ಷಗಾನ ಮತ್ತು ನೃತ್ಯಸಂಬಂಧೀ ಆಯಾಮಗಳನ್ನು ಈ ಮೂಲಕ ನೀಡಲಾಗುತ್ತದೆ. ಈ ಪ್ರಯತ್ನಕ್ಕೆ ಭ್ರಮರಿಯ ಹಿರಿಯ ಮಾರ್ಗದರ್ಶಿ ಶತಾವಧಾನಿ ಡಾ। ಆರ್. ಗಣೇಶ್, ಏಕವ್ಯಕ್ತಿ ಯಕ್ಷಗಾನದ ಸಾವಿರದ ಸಾಧಕ ಮಂಟಪ ಪ್ರಭಾಕರ ಉಪಾಧ್ಯ ಮತ್ತು ನಮ್ಮ ಬಳಗದ ಹಿರಿಯ ಕವಿ ಧಾರವಾಡದ ದಿವಾಕರ ಹೆಗಡೆಯವರು ಹೃತ್ಪೂರ್ವಕವಾಗಿ ಕೈಜೋಡಿಸಿದ್ದಾರೆ. ಶತಾವಧಾನಿ ಡಾ। ಆರ್. ಗಣೇಶ್ ಅವರ 'ಭಾಮಿನೀ' ಕಾವ್ಯ, ಅದಕ್ಕೆ ಮಂಟಪರ ಪ್ರಥಮ ಅಭಿವ್ಯಕ್ತಿಯ ಅನುಭವದ ಹೂರಣ, ಮತ್ತು ದಿವಾಕರ ಹೆಗಡೆಯವರ ನೃತ್ಯಸಂಬಂಧೀ ನೋಟಗಳು ಜೊತೆಯಾಗಲಿವೆ. ಈ ಸಂಚಿಕೆಯು ನಾಯಿಕೆಯರ ನೋಟಕ್ಕೆ ಒಂದು ಮುನ್ನುಡಿ.

(ವಿ.ಸೂ : ಈ ವರೆಗೆ ಅಷ್ಟನಾಯಿಕೆಯರನ್ನು ಒಂದೇ ಮೂಸೆಯಲ್ಲಿ ಹಿಡಿದಿಡುವ ಪ್ರಯತ್ನ ಇಲ್ಲವೇ ಇಲ್ಲವೆಂಬಷ್ಟು ವಿರಳ. ಆದರೆ ಮಂಟಪರ 'ಭಾಮಿನೀ' ಅಷ್ಟನಾಯಿಕೆಯರ ಅಭಿವ್ಯಕ್ತಿ ವಿಷಯದಲ್ಲಿ ಒಂದು ಮೈಲಿಗಲ್ಲು. ಈಗ 'ಭಾಮಿನೀ'ಯ ಸಿ.ಡಿ.ಗಳು ಯುವ ಚಲನಚಿತ್ರ ನಿರ್ದೇಶಕ ಅಭಯಸಿಂಹ ಅವರ ಸಾಹಸದಲ್ಲಿ ಚೆಂದವಾಗಿ ಮೂಡಿಬಂದಿದ್ದು, ಸಿ.ಡಿ.ಗಳಿಂದ ಬಂದ ಧನ ಉಡುಪಿಯ ಯಕ್ಷ ಶಿಕ್ಷಣ ಟ್ರಸ್ಟ್‌ನ ಸದಭಿರುಚಿಯ ಕಾರ್ಯಕ್ರಮಗಳಿಗೆ ವಿನಿಯೋಗವಾಗಲಿದೆ. ಆಸಕ್ತರು ಸಂಘಟಕ ಶ್ರೀಯುತ ಮುರಳಿ ಕಡೆಕಾರ್ ಅವರನ್ನು ಸಂಪರ್ಕಿಸಬಹುದು. ಬೆಲೆ : 100 ರೂ. ; ಫೋನ್ ನಂ : +91 9449088708 )

# ಪೀಠಿಕೆ–ಪರಿಚಯ

* ಮನೂ 'ಬನ'

**ನಾ**ಯಕ– ನಾಯಿಕಾ ಭಾವಗಳು ನಾಟ್ಯದ ಸಾತ್ವಿಕ ಅಭಿನಯಕ್ಕೆ ಪೋಷಕವಾದ ಹಾವ ಭಾವಗಳು. ಭಾವನೆಗಳ ಪರಸ್ಪರ ವಿನಿಮಯ ಮತ್ತು ಅದರ ಅವಸ್ಥೆಗಳೇ ಇಲ್ಲಿ ಮೂಲವಸ್ತು. ರಸಗಳಲ್ಲೇ ಪ್ರಧಾನವೆನಿಸುವ ಶೃಂಗಾರದ ಅವಸ್ಥೆಗೆ ಪೂರಕವಾಗಿ ರಚಿಸಲ್ಪಟ್ಟವು. ಆದರೂ ಪ್ರತಿಯೊಂದು ನಾಯಿಕೆ–ನಾಯಕರ ರಸಪ್ರತಿಪಾದನೆ ನವರಸಕ್ಕಿಂತಲೂ ಮೀರಿದ್ದು ಎಂಬುದು ಲಾಕ್ಷಣಿಕರ ಅಭಿಪ್ರಾಯ. (ನಾಯಕಿ ಎಂಬ ಪದ ಉಚ್ಚಾರ ತಪ್ಪು)

ಅಮೂರ್ತವನ್ನು ಮೂರ್ತವಾಗಿಸುವಲ್ಲಿ ಮತ್ತು ಮೂರ್ತ ಕಲ್ಪನೆಯ ಮೂಲಕ ಅಮೂರ್ತವನ್ನು ಕಾಣುವಲ್ಲಿ ನಾಯಿಕೆ–ನಾಯಕ ಭಾವವು ನೃತ್ಯದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಜೀವಾತ್ಮ ಪರಮಾತ್ಮನ ಸಾಂಗತ್ಯವನ್ನು ಲೌಕಿಕ ಉದಾಹರಣೆಗಳ ಮೂಲಕ ಕಂಡುಕೊಂಡು ಲೌಕಿಕದ ಆನಂದ ಮತ್ತು ಪಾರಮಾರ್ಥಿಕದ ಅನುಭವವನ್ನು ಕಲಾವಿದನು ಸಾಕ್ಷಾತ್ಕರಿಸಿಕೊಳ್ಳುವುದರೊಂದಿಗೆ ರಸಿಕರಿಗೂ ದಕ್ಕುವಂತೆ ಮಾಡುವುದು ನಿಜಕ್ಕೂ ನಾಯಿಕಾ–ನಾಯಕ ಭಾವಗಳ ಪರಮ ಗುರಿ. ಕಲಾವಿದರಿಗೆ ಇವು ಒಡ್ಡುವ ಸವಾಲು ಅವರ ಪ್ರತಿಭಾಸಂಪನ್ನತೆಗೆ ಹಿಡಿಯುವ ದರ್ಪಣ.

ತತ್ತ್ವಾದರ್ಶವಾದ, ಆಧ್ಯಾತ್ಮಿಕ ಸಾಂಕೇತಿಕತೆಯ, ಸೌಂದರ್ಯದ ಸಮೀಕರಣವುಳ್ಳ ಈ ಭಾವ ಗಳನ್ನು ನಾಟ್ಯಶಾಸ್ತ್ರದ ಪ್ರಾರಂಭದ ಅಧ್ಯಾಯಗಳಲ್ಲಿಯೇ ಗುರುತಿಸಲಾಗುತ್ತದೆ. ಈ ಭಾವ ಉಪನಿಷತ್ತು, ಪುರಾಣಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಉಲ್ಲೇಖಿತವಾಗಿದೆ. ಜಯದೇವನ ಅಷ್ಟಪದಿ ನಾಯಿಕಾ ಭಾವದ ನಿರೂಪಣೆಯಲ್ಲಿ ಸಂದರ್ಭ ಸಹಿತವಾಗಿ ಲೌಕಿಕ ಮತ್ತು ದೈವಿಕವನ್ನು ಸಂಯೋಗಗೊಳಿಸುವ ಮಹೋನ್ನತ ಕಾವ್ಯ.

ಭರತಮುನಿಯು ನಾಟಕವನ್ನು ಸಂಯೋಜಿಸುವಾಗ 4 ವೃತ್ತಿಗಳಲ್ಲೊಂದಾದ 'ಕೈಶಿಕೀ' ವೃತ್ತಿಯನ್ನು ಆಚರಿಸುವ ನೃತ್ಯಗಾತಿಯರ ಕೊರತೆ ಕಂಡುಕೊಂಡು ಬ್ರಹ್ಮನನ್ನು ಪ್ರಾರ್ಥಿಸಿ, ನಾಯಿಕಾ ಪಾತ್ರಗಳನ್ನು ನಿರ್ವಹಿಸುವ ಅಪ್ಸರೆಯರನ್ನು ಸೃಷ್ಟಿಸಿಕೊಂಡನೆಂದು ಪ್ರತೀತಿ.

ತದನಂತರ ದೇವಸ್ಥಾನಗಳಿಂದ ಪೋಷಿತವಾಗುತ್ತಿದ್ದ ನೃತ್ಯಕಲೆ; ದೇವರನ್ನು ಸ್ತುತಿಸಿ, ನರ್ತಿಸುವ ದೇವದಾಸಿಯರನ್ನು ಸರ್ವೋಚ್ಚ ನಾಯಿಕೆಯರೆಂದು ಪರಿಗಣಿಸಿತು. ರಾಜಾಶ್ರಯದಲ್ಲಿ ಈ ಕಲ್ಪನೆಯು ರಾಜನಿಗೆ ಸೀಮಿತವಾಗಿ ಕ್ರಮೇಣ ಹಲವು ಸ್ಥಿತ್ಯಂತರಗಳಿಂದ ಕಳಂಕಕ್ಕೊಳಗಾಯಿತು. ಮುಂದೆ 20ನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ನೃತ್ಯವನ್ನು ಬಹಿಷ್ಕಾರ ಮಾಡುವ ಕ್ರಮಗಳು ತಲೆಯೆತ್ತಿ ನಿಂತಾಗ ನೃತ್ಯದ ಪುನರುಜ್ಜೀವನಕ್ಕೆ ರುಕ್ಮಿಣೀ ದೇವಿ ಅರುಂಡೇಲ್ ಸದಿರ್‌ನಲ್ಲಿ ಬಳಸುತ್ತಿದ್ದ ಶೃಂಗಾರದ ಕಲ್ಪನೆಯನ್ನೇ ಕಿತ್ತೆಸೆದು ನೃತ್ಯದ ನವೀಕರಣಕ್ಕೆಂದು ಭರತನಾಟ್ಯವೆಂದು ಹೆಸರಿಸಿ ಭಕ್ತಿ ಶೃಂಗಾರವೆಂಬ ಹೊಸ ಕಲ್ಪನೆಯನ್ನೇ ಪರಿಚಯಿಸಿದರು.

ಬಹುಚಾಲ್ತಿಯಲ್ಲಿರುವ ನಾಟ್ಯಶಾಸ್ತ್ರ ಪ್ರಸ್ತಾಪಿಸುವ ನಾಯಿಕೆಯರು 8, ನಾಯಕರು 4. ಅವು ಹೀಗಿವೆ :

ನಾಯಕರು : **ಧೀರೋದಾತ್ತ, ಧೀರಲಲಿತ, ಧೀರೋದ್ಧಟ, ಧೀರಶಾಂತ.**

ನಾಯಿಕೆಯರು : **ಪ್ರೋಷಿತಪತಿಕಾ, ವಾಸಕಸಜ್ಜಿಕಾ, ಅಭಿಸಾರಿಕಾ, ವಿಪ್ರಲಬ್ಧಾ, ವಿರಹೋತ್ಕಂಠಿತಾ, ಖಂಡಿತಾ, ಕಲಹಾಂತರಿತಾ, ಸ್ವಾಧೀನಪತಿಕಾ.**

ಇವುಗಳಲ್ಲೂ ಬೇರೆ ಬೇರೆ ವಿಧಥ, ವರ್ಗದ, ಸ್ಥಿತಿಯ, ಗುಣ, ನಡವಳಿಕೆಯ ನಾಯಿಕೆಯರು ಮತ್ತು ನಾಯಕರ ಬೇಧಗಳಿವೆ. ಇಂತಹ ನಾಯಿಕಾ–ನಾಯಕ ಬೇಧಗಳಿಗೆ ಸಹಾಯಕ–ಸಹಾಯಕಿಯರಾಗಿ ಸಖ–ಸಖಿಯರಿದ್ದು ಅವರಲ್ಲೂ ಬಗೆಬಗೆಯ ರಸ, ಭಾವಾನುಭಾವ, ವಿಭಾವಾದಿ ಮನೋಧರ್ಮಗಳಿವೆ. ಜೊತೆಗೆ ಶೃಂಗಾರದ ಬೇರೆ ಬೇರೆ ವಿಧಗಳಲ್ಲಿ ನಾಯಿಕೆಯರ ಹಲವು ಅವಸ್ಥೆಗಳು ಇನ್ನೂ ಅಧಿಕ.

ಉಳಿದಂತೆ ಮೇಲಿನ ನಾಯಿಕೆಯರಿಗೆ ಪೂರಕವಾಗಿ ಉತ್ತಮ, ಮಧ್ಯಮ, ಅಧಮ ಎಂದೋ; ಸ್ವೀಯಾ, ಪರಕೀಯ, ಸಾಮಾನ್ಯೆ ಎಂದೋ; ಮುಗ್ಧಾ, ಮಧ್ಯಾ, ಪ್ರಗಲ್ಭಾ ಎಂಬುದಾಗಿಯೋ; ಜ್ಯೇಷ್ಠಾ, ಕನಿಷ್ಠಾ; ಧೀರ, ಧೀರಾಧೀರ, ಅಧೀರೆ; ಉಢಾ, ಅನುಢಾ; ಕನ್ಯಕೆ, ಪರೋಢೆ ಎಂದೋ ಪ್ರಧಾನ ನಾಯಿಕೆಯರನ್ನೂ ಒಳಗೊಂಡಂತೆ ವಿಭಾಗಿಸುವ ಪ್ರಕ್ರಿಯೆ ಹೆಚ್ಚು ಜನಜನಿತ. ಜೊತೆಗೆ ಪುನರ್ಭೂ (ಉಪವಿಭಾಗ: ಅಕ್ಷತ, ಕ್ಷತ, ಯತಾಯತ, ಯಯವರ), ಸ್ವೈರಿಣಿ, ಗಣಿಕ, ರೂಪಜಿವಾ, ವಿಲಾಸಿನಿ, ಸ್ವಯಂವರ, ವೇಶ್ಯೆ, ಕುಲಜ, ಪನ್ಯಕಾಮಿನಿ, ಕ್ಷತ್ರಿಯ, ದಿವ್ಯ, ಅದಿವ್ಯ, ದಿವ್ಯಾದಿವ್ಯ ಮುಂತಾದ ನಾಯಿಕೆಯರ ಪ್ರಸ್ತಾಪವೂ ಇವೆ. ಇವುಗಳೆಲ್ಲದರೊಳಗೂ ಹಲವು ಉಪವಿಭಾಗಗಳಿದ್ದು ಅವುಗಳ ಪೈಕಿ ಕೆಲವು ಕೆಳಗಿನಂತಿವೆ.

ಜ್ಞಾತ ಯೌವನ, ಅಜ್ಞಾತ ಯೌವನ, ನವೋಢ, ವಿಶ್ರಬ್ಧ ನವೋಢ, ಗುಪ್ತ, ವಿದಗ್ಧ, ಲಕ್ಷಿತ, ಕುಲಟ, ಅನುಸಾಯನ, ಮಾನವತಿ, ವಕ್ರೋಕ್ತಿ ಗರ್ವಿತ, ಅನ್ಯ ಸಂಭೋಗ ದುಃಖಿತ, ಪ್ರೇಮ ಗರ್ವಿತ, ಸೌಂದರ್ಯ ಗರ್ವಿತ, ಪ್ರಥಮಾವತೀರ್ಣ, ಪ್ರಥಮಾನತೀರ್ಣ, ರತಿವಾಮ, ಮಾನಮೃದು, ಸಮಾಧಿಕ ಲಜ್ಜಾವತಿ, ವಿಚಿತ್ರ ಸುರತ, ಪ್ರರೂಢ ಸ್ಮರ, ಪ್ರರೂಢ ಯೌವನ, ಈಶತ್ ಪ್ರಗಲ್ಭಾ ವಚನ, ಮಧ್ಯಮ ವೃದ್ದಿತ, ಸ್ಮರಂಧಾ, ಗಾಢ ತಾರುಣ್ಯ, ಸಮಸ್ಥರದ ಕೋವಿದ, ಭಾವೋನ್ನತ, ದಾಪ್ರೀಡ, ಅಕ್ರಾಂತ ನಾಯಕ, ರಕ್ತ, ವಿರಕ್ತ, ನವ–ವಯ, ನವ–ಕಾಮ, ರತೌವಾಮ, ಸಖಿವಸಾ, ಸವ್ರೀದರತ ಪ್ರಯತ್ನಾ, ರೋಷಾಕೃತವಾಸ್ಪ–ಮೌನಾ, ಮದನವಿಕಾರ, ಮೃದ್ವಿ, ಅಕ್ಷಮ,  ಸಮಾನ ಲಜ್ಜಾಮದನಾ, ಪ್ರೋದ್ಯತ್ತಾರುಣ್ಯಶಾಲಿನೀ, ಕಿಂಚಿತ ಪ್ರಗಲ್ಭೋಕ್ತಿ, ಮೋಹಾಂತ ಸುರಕ್ಷಮಾ, ಪೂರ್ಣ ತಾರುಣ್ಯ, ಮಧಾಂಧ, ಊರೂರಾತೋತ್ಸುತ, ರಸಾಕ್ರಾಂತ ವಲ್ಲಭ, ಭೂರಿಭಾವೋ ದ್ಯಾಮಾಭಿಜ್ಞ, ಅತಿಪ್ರೌಢೋಕ್ತಿ, ಅತಿ ಪ್ರೌಢ ಜ್ಯೇಷ್ಠ, ಕ್ಲುಪ್ತಾನುರಾಗ, ಕಲ್ಪಿತಾನುರಾಗ ಇತ್ಯಾದಿ.

ನಾಯಿಕೆಯ ಸಹಾಯಕಿಯರಾಗಿ ದಾಸಿ, ಸಖಿ, ರಜಕಸ್ತ್ರೀ, ಸಹೋದರಿ, ಭಿಕ್ಷುಕಿ, ಸನ್ಯಾಸಿನಿ, ಚಿತ್ರಗಾರ್ತಿ, ಕುಶಲ ಕಾರ್ಯ ನಿರತೆ, ಮಲತಾಯಿಯ ಮಗಳು, ನೆರೆಮನೆಯವಳು, ತಾಂಬೂಲ ತರುವವಳು, ಗಂಧ ಪೂಸುವವಳು ಎಂದು ಹಲವು ದೂತಿಯರ ವರ್ಣನೆ ಕಂಡುಬಂದಿದೆ.

ಆದರೆ ಪ್ರಧಾನ ನಾಯಕರ ಹೊರತಾಗಿ ನಮಗೆ ಕಾಣುವುದು ಪತಿ, ಉಪಪತಿ, ವೈಶಿಕ ಎಂಬ ಗುಣ ಆಧಾರ ನಾಯಕರ ವಿಭಾಗವನ್ನು; ಅನುಕೂಲ, ದಕ್ಷಿಣ, ಶಠ, ಧೃಷ್ಟ ಎಂಬ ನಡವಳಿಕೆ ಆಧರಿತ ವರ್ಗವನ್ನು ; ಉತ್ತಮ, ಮಧ್ಯಮ, ಅಧಮ ಎಂಬ ಭೇದಗಳು ಮತ್ತು ನಾಯಕನ ಸಹಾಯಕರಾಗಿ ವಿಟ, ವಿದೂಷಕ, ಚೇಟ ಹಾಗು ವಿರೋಧಿಯೆನಿಸುವ ಪ್ರತಿನಾಯಕ.

ಇವೆಲ್ಲಾ ವಿಭಾಗದ ಲಕ್ಷಣ, ಮತ್ತು ಅದರೊಳಗಿನ ಮತ್ತಷ್ಟು ಉಪವಿಭಾಗಗಳನ್ನು, ಭಾವಗಳಿಗೆ ತಕ್ಕುದಾದ ಲಕ್ಷಣಗಳು, ಪಾತ್ರ–ಗುಣ–ದೋಷಗಳು ಹೇಳುತ್ತಾ ಹೋದರೆ ಬೃಹತ್ ಸಂಶೋಧನೆ ಆಗುವಷ್ಟು ವಿಷಯವಿದೆ. ಅದರಲ್ಲೂ ಸ್ತ್ರೀಪಾತ್ರವನ್ನುದ್ದೇಶಿಸುವ ನಾಯಿಕಾ ಗುಣಧರ್ಮಗಳು ನಾಯಕನಿಗಿಂತ ಹೆಚ್ಚು ಆಯ್ಕೆ ಮತ್ತು ವಿವಿಧತೆಯುಳ್ಳವುಗಳು. ಸಹಜವಾಗಿ ಗಮನಿಸಿದರೂ ಪುರುಷ ಭಾವಾಭಿವ್ಯಕ್ತಿಗಿಂತ ಸ್ತ್ರೀ ವೈವಿಧ್ಯಮಯ, ವಿಶಿಷ್ಟವೆನಿಸುವ ಭಾವ–ರಸ ಪ್ರಕಟಣೆಯ ಹೇತು.

ಹಾಗಾಗಿ ಭರತನಷ್ಟೇ ಅಲ್ಲದೆ ರುದ್ರಟನ ಕಾವ್ಯಾಲಂಕಾರ, ಶೃಂಗಾರ ತಿಲಕ, ಧನಂಜಯನ ದಶರೂಪಕ, ಭೋಜರಾಜನ ಸರಸ್ವತಿ ಕಂಠಾಭರಣ, ಶೃಂಗಾರ ಪ್ರಕಾಶ, ವಾಗ್ಭಟನ ವಾಗ್ಭಂಟಾಲಂಕಾರ, ಹೇಮಚಂದ್ರನ ಕಾವ್ಯಾನುಶಾಸನ, ಶಾರದಾತನಯನ ಭಾವಪ್ರಕಾಶ, ಸಿಂಹಭೂಪಾಲನ ಲಾಸ್ಯರಂಜನ, ರಸಾರ್ಣವ, ಸುಧಾಕರ, ಪುಂಡರೀಕ ವಿಠಲನ ನರ್ತನ ನಿರ್ಣಯ, ವಿದ್ಯಾನಾಥನ ಪ್ರತಾಪರುದ್ರ, ಯಶೋಭೂಷಣ, ವಿಶ್ವನಾಥನ ಸಾಹಿತ್ಯದರ್ಪಣ, ಅಚ್ಯುತ ಶರ್ಮನ ಸಾಹಿತ್ಯಸಾರ, ಭಾನುದತ್ತನ ಕೃತಿಗಳು ಹಾಗೂ ಅಗ್ನಿಪುರಾಣ, ಭರತ ರಸಪ್ರಕರಣಂ, ನಾಟ್ಯದರ್ಪಣ ಇತ್ಯಾದಿಯಾಗಿ ಒಬ್ಬೊಬ್ಬ ನಾಟ್ಯ ಶಾಸ್ತ್ರಜ್ಞನೂ ತನಗೆ ತೋರಿದಂತೆ ವಿಧ ವಿಧವಾಗಿ ನಾಯಿಕೆಯರನ್ನು ವರ್ಣಿಸಿದ್ದಾರೆ. ಹೀಗೆ ಲೆಕ್ಕ ಹಾಕುತ್ತಾ ವಿಧದೊಳಗೊಂದು ವಿಧವೆಂಬಂತೆ ಅರಸುತ್ತಾ ಹೋದರೆ ಐದುಸಾವಿರಕ್ಕಿಂತಲೂ ಅಧಿಕ ನಾಯಿಕೆಯರನ್ನು ಕಾಣಬಹುದು.

ಈ ಭಾವಗಳು ನೃತ್ಯ, ನಾಟ್ಯ ಸಂಬಂಧೀ ವಸ್ತುಗಳಾದ ರೂಪಕ, ಶಬ್ದ, ವರ್ಣ, ಪದ, ಜಾವಳಿ, ಕೀರ್ತನೆ, ಅಷ್ಟಪದಿ, ತರಂಗ, ದೇವರನಾಮ, ಚೂರ್ಣಿಕೆ, ಕಲಾಪ, ರಾಸ್ ನೃತ್ಯ, ಯಕ್ಷಗಾನ ಪ್ರಸಂಗ ಹೀಗೆ ಭಾರತೀಯ ನರ್ತನಕಲೆಯುದ್ದಕ್ಕೂ ಹಾಸುಹೊಕ್ಕಾಗಿದೆ. ರಸಿಕರಿಗೆ, ಓದುಗರಿಗೆ ಸರಳವಾಗಿ ಅರ್ಥವಾಗುವ ನಿಟ್ಟಿನಲ್ಲಿ ಮುಂದಿನ ಸಂಚಿಕೆಗಳಲ್ಲಿ ಪ್ರಧಾನ ನಾಯಿಕೆಯರ ಪ್ರಸ್ತಾಪ ಬಂದಾಗ ಆದಷ್ಟೂ ಸಮಗ್ರವಾಗಿ ಮತ್ತು ಸಂಕ್ಷಿಪ್ತವಾಗಿ ಹೇಳಲಾಗುವುದು.

# ಭಾಮಿನೀ

– ಶತಾವಧಾನಿ ಡಾ. ಆರ್. ಗಣೇಶ್

### ರಾಗ– ನಾಟ ; ಕಂದಪದ್ಯ

ಶ್ರೀಮದ್ವಿಶಾಲವಿಶ್ವ
ಪ್ರೇಮಾಂಗಣರಣರಂಗದೊಳ್ ಸ್ವಯಂ ನಾಯಕತಾ।
ಸ್ಥೇಮಂ ಜೀವಾತ್ಮಗಣಾ
ರಾಮಂ ಚಿನ್ನಾಯಿಕಾಭಿರಾಮಂ ಗೆಲ್ವಂ ॥


### ರಾಗ : ಕಲ್ಯಾಣಿ ; ಉತ್ಪಲಮಾಲಾವೃತ್ತ

ಲೋಕದ ಭಾವಜಾಲವಲಯಂಗಳೆ ನಾಯಿಕೆಯರ್ಕಳಳ್ತಿಯಿಂ
ಸ್ವೀಕರಿಸಲ್ಕಲೋಕರಸಪಾಕಮೆ ಗೋಕುಲಪಾಲನಾಯಕಾ।
ಲೋಕನಲೀಲೆಯಾಗೆ ಮಿಗೆ ಸಂದುದು ಬಂದುದು ಯಕ್ಷಗಾನ ಬಿ
ಬ್ಬೋಕವಿಧಾನದಿಂದೆ ರುಚಿರಮ್ಯಶುಚಿಸ್ಫುರಿತಂ ನಿರೂಪಣಂ ॥



### ರಾಗ –ಕಾಪಿ ; ಕಂದಪದ್ಯ

ಶೃಂಗಾರದ ಶಿಖರಾನುಭ
ವಂ ಗಡ ದೊರೆಕೊಳ್ವುದಿಲ್ಲಿ ರಸಿಕರ್ಗೊಲವಿಂ।
ಸಂಗೀತಕಮಿದು ರೂಪಕ
ಮಂಗೀಕೃತಮಕ್ಕೆ ನಾಯಿಕಾಷ್ಟನಾಕಂ॥



ಹಂಸಪಕ್ಷ ಹಸ್ತ

# ಹಸ್ತ ಮಯೂರಿ

***ಲಕ್ಷಣ:*** *ಮಧ್ಯದ ಮೂರು ಬೆರಳುಗಳನ್ನು ಸಮನಾಗಿ ನೀಡಿ ಕಿರುಬೆರಳನ್ನು ದೂರ ಚಾಚಬೇಕು. ಹೆಬ್ಬೆರಳನ್ನು ಸ್ವಲ್ಪ ಬಗ್ಗಿಸಿ ಹಿಡಿಯಬೇಕು. ಹಂಸಪಕ್ಷ ಎಂದರೆ ಹಂಸದ ರೆಕ್ಕೆ ಎಂದರ್ಥ. ಇದು ಸ್ತ್ರೀ ಹಸ್ತ ಪ್ರಕಾರಕ್ಕೆ ಸೇರಿದ್ದು.*


*ತಂಡು ಮಹರ್ಷಿ ತಾಂಡವವನ್ನು ಕಲಿಯುವಾಗ ಪ್ರಯೋಗಿಸಿದ ಹಸ್ತವಿದು. ಅಪ್ಸರ ವರ್ಣ, ಶ್ಯಾಮಲ ಬಣ್ಣ, ಋಷಿ : ಭಾರತಿ, ಅಧಿದೇವತೆ : ಪಂಚಸಾಯಕ (ಮನ್ಮಥ).*

**ವಿನಿಯೋಗ:** ಆರು ಎಂಬ ಸಂಖ್ಯಾ ಸೂಚನೆ, ಸೇತುವೆ ಕಟ್ಟುವುದು, ಉಗುರಿನಿಂದಾದ ಗುರುತು, ಬೊಕ್ಕಸ, ಸಂಪತ್ತು, ಕಾಯ್ದು ಇರುವುದು.

**ಇತರೇ ವಿನಿಯೋಗ :** ನೀರು ಹೊಯ್ಯುವುದು, ಗಂಧಲೇಪನ, ಪ್ರತಿಗ್ರಹ, ಆಚಮನ, ಆಲಿಂಗನ, ಬಹುಮೌಢ್ಯ, ಸ್ತಂಭವೆಂಬ ಸಾತ್ವಿಕಭಾವ, ರೋಮಾಂಚ, ಸ್ಪರ್ಶ, ಮೈ ತಿಕ್ಕುವುದು, ಸ್ತ್ರೀಯರ ಶೃಂಗಾರ ನಟನೆ, ಮುಚ್ಚುವುದು, ಕರೆಯುವುದು, ಹಕ್ಕಿಯ ರೆಕ್ಕೆ, ಕುಳ್ಳ, ಮೇಘ, ನಾಯಕಿಯ ಸಂತಾಪ, ಕುಶಲ ಪ್ರಶ್ನೆ, ಸತ್ಯ, ಸಂತೋಷ, ದುಃಖ, 'ಹೋಗಿ ಬಾ' ಎಂಬ ಮಾತು, ದುಃಖ, ಗಲ್ಲ ಹಿಡಿಯುವುದು, ಪ್ರತ್ಯಕ್ಷಾಲಿಂಗನ, ಪರೋಕ್ಷಾಲಿಂಗನ, ಕಟಾಕ್ಷ ವೀಕ್ಷಣೆ, ಭಯ ಚಿಂತೆಯಿಂದ ಗಂಡಸ್ಥಲವನ್ನು ಹಿಡಿದುಕೊಳ್ಳುವುದಕ್ಕೆ, ಏನನ್ನಾದರೂ ಸ್ವೀಕರಿಸುವುದಕ್ಕೆ, ರೋಮಾಂಚನದ ಹರ್ಷ, ವಾಸನಾಸಂಬಂಧ, ಉಡುಗೊರೆ ಸ್ವೀಕಾರ, ಬ್ರಾಹ್ಮಣ ಭೋಜನ, ಸ್ಪರ್ಶ, ಸಮ್ಮೋಹನ ಚೂರ್ಣ, ವೀಣಾವಾದನ, ಬೇರ್ಪಡುವಿಕೆ, ಸೂರ್ಯಶಾಖ, ಶ್ಯಾಮ ಬಣ್ಣ, ಅಪ್ಸರೆ ಜಾತಿ, ಬೈತಲೆಬೊಟ್ಟು, ಮರ್ಯಾದಾಭಾವ, ಶುದ್ಧನೃತ್ಯ ಶೈಲಿ, ದೂರಕ್ಕೆ ಕರೆದುಕೊಂಡು ಹೋಗುವುದು, ಒಟ್ಟು ಸೇರಿಸುವುದು, ಪ್ರತಿಬಂಧಿಸುವುದು, ಕಾರ್ಯ ಸಂಪೂರ್ಣಗೊಳ್ಳುವುದು, ವ್ಯಕ್ತಿ ಚಿತ್ರ ಬರೆಯುವುದು ಇತ್ಯಾದಿ.

ಯುವತಿ, ಭೋಜನ, ಕೊಟ್ಟ ವಸ್ತುಗಳನ್ನು ಅಂಗೀಕರಿಸುವುದು, ಗುರಾಣಿ, ಸನ್ನಾಹ, ಆಲಿಂಗನ, ಆಚಮನ, ಸ್ಪರ್ಶ, ಹೋಗುವುದು–ಬರುವುದು, ಸ್ತನಗಳನ್ನು ತಿಕ್ಕುವುದು, ದೊಡ್ಡ ಸ್ತಂಭ, ಆಕಾಶ, ದೇಶ, ವಿಭ್ರಮ, ರೋಮಾಂಚ, ಲಕ್ಷಣ, ತುಪ್ಪ, ಅಮೃತ, ಪಶ್ಚಾತ್ತಾಪ, ರಸ, ತಾವರೆ, ಮಾವು, ರಸಾಯನ, ಖೇದ, ವಿಷಾದ, ಸಂವಾದ, ಹೂಗಳನ್ನು ಕೊಯ್ಯುವುದು, ನಿಕಟವಾಗಿರುವುದು, ಕಪಟ, ದಾನ, ಕಾಲ, ವೇದ, ಚಿಂತನೆ, ಮದ್ಗುರವೆಂಬ ಮೀನು, ಆನೆಯ ತಲೆ, ತಿಮಿಂಗಿಲ, ಗಂಟಲು, ಕುತ್ತಿಗೆ, ಹೃದಯ, ನಾಲಗೆ, ಪಾದ, ಸ್ಥಿತಗೊಳ್ಳುವುದು, ಬೊಗಸೆ ತುಂಬಾ ಇರುವ ನೀರು, ಹೊದಿಕೆ ಇತ್ಯಾದಿಗಳನ್ನು ಸಂವಹಿಸುತ್ತದೆ.

**ಸಂಕರ ಹಸ್ತ** ವಿಭಾಗದಲ್ಲಿ, ಹಂಸಪಕ್ಷ ಹಸ್ತವನ್ನು ಎಡಗಿವಿಯಿಂದ ಬಲಗಿವಿಯವರೆಗೂ ಪ್ರಸರಿಸಿದರೆ ಮುಂಗುರುಳು, ಅಥವಾ ಕಿರೀಟಬಂಧಿ ಎಂದರ್ಥ. ಎರಡೂ ಹಂಸಪಕ್ಷಗಳನ್ನು ನಿತಂಬ ಅಥವಾ ತೊಡೆಯಲ್ಲಿಟ್ಟರೆ ವಸ್ತ್ರ ಧರಿಸಿದ ಸಂಕೇತ. ಹಣೆಯಿಂದ ಹಿಂಬದಿ ಕೂದಲು ವರೆಗೆ ಪ್ರಸರಿಸಿದರೆ ಆಭರಣಗಳ ಧರಿಸುವಿಕೆಯ ಸಂಕೇತ. ಹಂಸಪಕ್ಷವನ್ನು ಎಡಭುಜದ ಮೇಲಿಟ್ಟು ಕೆಳ ಕಿಬ್ಬೊಟ್ಟೆಯ ವರೆಗೂ ವಿರುದ್ಧ ದಿಕ್ಕಿಗೆ ತಂದರೆ ಅದರರ್ಥ ಜನಿವಾರ ಧರಿಸುವಿಕೆ. ಎರಡೂ ಹಂಸಪಕ್ಷಗಳನ್ನು ತೋಳುಗಳಲ್ಲಿ ವಿರುದ್ಧದಿಕ್ಕಿಗೆ ಹಿಡಿದರೆ ಸಂಬಂಧಗಳ ಕಡಿಯುವಿಕೆ ಎಂದರ್ಥ.



**ನಾನಾರ್ಥ ಹಸ್ತ** ವಿಭಾಗದಲ್ಲಿ ಹಂಸಪಕ್ಷವನ್ನು ಅಡ್ಡಲಾಗಿ, ಮೇಲ್ಮುಖ-ಕೆಳಮುಖವಾಗಿ ಹಿಡಿದರೆ ; ರೇಖೆ ಮತ್ತು ದ್ರವಪದಾರ್ಥ ವನ್ನು ಸೂಚಿಸುತ್ತದೆ.

ಭಗಿನೀ ಹಸ್ತ (ಸಹೋದರಿ)ಸೂಚನೆಗೆ ಬಲಗೈಯಿಂದ ಹಂಸಪಕ್ಷವನ್ನೂ, ಎಡಗೈಯಿಂದ ಕಾಂಗೂಲವನ್ನೂ ಹಿಡಿಯಬೇಕು. ಭರತಾರ್ಣವ ಹೇಳುವ ಸಮಯಸೂಚೀ ಮುದ್ರೆಗಳ ಪೈಕಿ ನಿಮೇಷ –ಸೆಕೆಂಡಿನ 2/135 ಭಾಗ ಎನ್ನಲು ಹಂಸಪಕ್ಷದ ವಿನಿಯೋಗವಿದೆ. ಅಭಿನಯ ದರ್ಪಣ ಪ್ರಸ್ತಾಪಿಸುವ ನಾಯಿಕೆಯರ ಪೈಕಿ ಶಂಕಿನೀ ಸ್ತ್ರೀಗೆ ಹಂಸಪಕ್ಷಹಸ್ತ ಅಥವಾ ಮೃಗಶೀರ್ಷವನ್ನು ಎದೆಯ ಮುಂದೆ ನಿಲ್ಲಿಸಬೇಕು.

**ನಿತ್ಯ ಜೀವನ**ದಲ್ಲಿ 'ಬಾ'ಎಂದು ಕರೆಯಲು, ಹಚ್ಚುವುದು, ಇತ್ಯಾದಿಗಳ ಉಪಯೋಗಕ್ಕೆ ಬಳಸುತ್ತಾರೆ.

**ಸಂಯುತ ಹಸ್ತಗಳ ಪೈಕಿ** ನಾಟ್ಯಶಾಸ್ತ್ರ ಉಲ್ಲೇಖಿಸುವ **ವರ್ಧಮಾನ ಹಸ್ತದ ಲಕ್ಷಣ** ಎರಡು ಹಂಸಪಕ್ಷಗಳನ್ನು ಪರಾಙ್ಮುಖವಾಗಿ ಅಂದರೆ ಅಂಗೈಗಳನ್ನು ತನಗೆ ಹಿಮ್ಮುಖವಾಗಿರುವಂತೆ ಮುಂಗೈಗಳಲ್ಲಿ ಕೂಡಿಸಿ ಹಿಡಿಯುವುದೇ ಆಗಿದೆ. **ವಿನಿಯೋಗ** : ಕಿಟಕಿ, ಬಾಗಿಲು ಮೊದಲಾದುವುಗಳನ್ನು ತೆರೆಯುವುದು, ಪರದೆ ಹಾಕಿದ ಕಿಟಕಿ, ಶತ್ರುಗಳ ಎದೆಯನ್ನು ಸೀಳುವುದು, 'ನಾನಾ ಪ್ರಕಾರ' ಎನ್ನುವುದು, 'ಕೊಟ್ಟೆವು', 'ಒಂದಾನೊಂದು ಕಾಲದಲ್ಲಿ' ಎಂಬ ಭಾವ, 'ಏನು ಏನು' ಎನ್ನುವುದು, ದರ್ಭೆ ಹಿಡಿಯುವುದು, 'ಅತಿಪ್ರಯಾಸ' ಎನ್ನುವುದು, 'ಏನೋ ಒಂದು' ಎಂಬ ಭಾವ, ದೊಡ್ಡ ದೊಡ್ಡ ಕಟ್ಟಡಗಳ ನಗರ, ಪಟ್ಟಣ, ವಸ್ತ್ರಗಳನ್ನು ಹರಿಯುವುದು, ಬಟ್ಟೆಗಳನ್ನು ಶುಚಿಗೊಳಿಸುವುದು, ತೆಗೆದುಕೊಳ್ಳುವುದು, ಒಗ್ಗಟ್ಟು, ಸಂಕುಚನ, ಕಟ್ಟಳೆ, ಸತ್ಯ, ರಾಕ್ಷಸನ ಹೊಟ್ಟೆ ಬಗೆಯುವುದು, ನರಸಿಂಹ, ಮಹತ್ವ. **ನಿತ್ಯಜೀವನ**ದಲ್ಲಿ ಈಜುವಾಗ ನೀರನ್ನು ಸೀಳುವುದು, ಬೇರೆ ಬೇರೆ ಮಾಡುವುದು ಎಂಬರ್ಥದಲ್ಲೂ, ತೆರೆಯುವುದು, ಸೀಳುವುದು ಎಂದು ಸಂವಹಿಸಲು ಬಳಸುತ್ತಾರೆ.

**ನೃತ್ತ ಹಸ್ತಗಳ ಪೈಕಿ ಉದ್ವೃತ್ತ ಹಸ್ತಕ್ಕೆ** ಹಂಸಪಕ್ಷದ ಸಹಕಾರ ಬೇಕು. ಇಲ್ಲಿ ಕಟಕಾಮುಖವನ್ನು ಉಪಯೋಗಿಸಿ ಚತುರಶ್ರದಲ್ಲಿ ಇದ್ದ ಹಸ್ತಗಳನ್ನು ತಿರುಗಿಸಿ ಹಂಸಪಕ್ಷದಲ್ಲಿ ಹಿಡಿದು ಒಂದನ್ನು ಬೀಸಣಿಗೆಯಂತೆ

ತಿರುಗಿಸಬೇಕು. ಇನ್ನೊಂದು ಕೈಯ ಅಂಗೈ ಅಧೋಮುಖವಾಗಿರುವಂತೆ ಎದೆಯ ಬಳಿಗೆ ತರುವುದು. ಈ ಹಸ್ತಕ್ಕೆ **ತಲವೃಂತ**, **ಉಧ್ವೃತ್ತ** ಎಂಬ ಹೆಸರುಗಳೂ ಇವೆ. **ವಿನಿಯೋಗ** : ನಾಚಿಕೆ, ಸಂತಾಪ, ಮುಳ್ಳು, ಉಪಮೆ, ಕೊಂಬು, ಭಯ, ಗಣನೆ, ವ್ಯತ್ಯಾಸ, ಹಂಸದಂಪತಿ, ಮನೆ, ಉಯ್ಯಾಲೆಯಾಡುವ ಚಲನೆ, ಶಾಂತತೆ, ಜಲಶಕ್ತಿ, ಯೋಚಿಸುವುದು, ದೊಡ್ಡ ವಸ್ತು, ಮನೆ, 'ನಿಲ್ಲು', 'ಈಗ', 'ಬೇಡ' ಎನ್ನಲು ಬಳಕೆಯಾಗುತ್ತದೆ.

ಇನ್ನೊಂದು ನೃತ್ತ ಹಸ್ತ ತಲಮುಖಕ್ಕೆ ಚತುರಶ್ರ ಹಸ್ತಗಳನ್ನು ಹಂಸಪಕ್ಷದಲ್ಲಿರಿಸಿ ಅಂಗೈಗಳನ್ನು ಕೆಳಗೆ ಓರೆಯಾಗಿ ಇದಿರು–ಬದಿರಾಗಿ ಹಿಡಿಯುವುದು ಅಥವಾ ಎರಡು ಹಂಸಪಕ್ಷಗಳನ್ನು ಉದ್ವೃತ್ತ ಮಾಡಿ ಅಂಗೈಗಳು ಇದಿರುಬದಿರಾಗುವಂತೆ ಹಿಡಿಯುವುದು ಅಥವಾ ಭುಜದ ಬಳಿ ಹಿಡಿಯುವುದು. ತಲವಕ್ತ್ರ ಎನ್ನುವುದು ಈ ಹಸ್ತದ ಮತ್ತೊಂದು ಹೆಸರು. ಭರತಾರ್ಣವದಲ್ಲಿ ಉಲ್ಲೇಖಿತ. **ವಿನಿಯೋಗ** : ಆಲಂಗಿಸುವುದು, ದೊಡ್ಡವಸ್ತು, ಮನೋಹರವಾಗಿ ಧ್ವನಿಸುವ ಮದ್ದಳೆ, ಮಂಡಿ ನೃತ್ಯ, ಮುಖನಾಟ್ಯ, 'ಅಲ್ಲಿ–ಇಲ್ಲಿ' ಎನ್ನಲು, ಭುಜಂಗಾಸೂಕ್ಷ್ಮ ನಾಟ್ಯ, ಒಗ್ಗಟ್ಟು, ಅಧೀನ ಎಂಬುದನ್ನು ಅರ್ಥೈಸಿಕೊಳ್ಳುವುದು, ವಿಷಯಾಸಕ್ತ.

ಮತ್ತೊಂದು ನೃತ್ತ ಹಸ್ತ ಸ್ವಸ್ತಿಕಾಮುಖ **ಅಥವಾ ಸ್ವಸ್ತಿಕದ ಲಕ್ಷಣ** ಹಂಸಪಕ್ಷ ಹಸ್ತಗಳನ್ನು ಮುಂಗೈಯಲ್ಲಿ ಸ್ವಸ್ತಿಕವಾಗಿಸಿ ಇಡುವುದು. ಸ್ವಸ್ತಿಕ ಹಸ್ತಕ್ಕೆ ಸಮೀಪದ ಹಸ್ತವಿದು. **ವಿನಿಯೋಗ** : ಕಲ್ಪವೃಕ್ಷ, ಪರ್ವತ.

ನೃತ್ತ ಹಸ್ತವಾದ ರೇಚಿತ**ಕ್ಕೆ** ಹಂಸಪಕ್ಷದ ಹಸ್ತಗಳನ್ನು ತಿರುಗಿಸಿ ರೇಚಿತ (ಮೇಲೆ) ಮಾಡಿ ಭರದಿಂದ ಅಂಗೈಗಳನ್ನು ಮೇಲೆ ಚಾಚಬೇಕು. ಭರತಾರ್ಣವದಲ್ಲಿ ಅಲಪದ್ಮದ ಬಳಕೆಯಿದೆ.

**ವಿನಿಯೋಗ** : ಮಕ್ಕಳನ್ನು ಎತ್ತಿಕೊಳ್ಳುವುದು. ಚಿತ್ರಫಲಕವನ್ನು ತೋರಿಸುವುದು, ಪರಶಿವನ ಚಾಲೀಯ ನಟನ, ತೆಂಗಿನಕಾಯಿ, ಆರ್ತನಾದ, ಪಾರ್ಶ್ವನಟನ, ಕಲ್ಪವೃಕ್ಷ, ಯಂತ್ರದ ಕಿರಿಕಿರಿಗಳು, ನೃತ್ಯದ ಅಂತಿಮ ಘಟ್ಟದ ಹೊತ್ತು ಎಂಬಲ್ಲಿ ಬಳಕೆಯಾಗುತ್ತದೆ.

**ಕಥಕಳಿಯಲ್ಲಿ** ಹಂಸಪಕ್ಷಕ್ಕೆ **ಕರ್ತರೀಮುಖ**ವೆಂದು ಕರೆಯುತ್ತಾರೆ. ಕಿರುಬೆರಳನ್ನು ಮೇಲೆತ್ತಿ, ಉಳಿದ ಮೂರು ಬೆರಳನ್ನು ಒಟ್ಟಿಗೆ ಮುಂದಕ್ಕೆ ತಂದು ಹೆಬ್ಬೆರಳು ತೋರುಬೆರಳ ಮಧ್ಯಗೆರೆಗೆ ಸೇರುವಂತೆ ಮಾಡುವುದು ಅದರ ಲಕ್ಷಣ. **ವಿನಿಯೋಗ** : ಪಾಪ, ಆಯಾಸ, ಹಸಿವು, ಬ್ರಾಹ್ಮಣ, ಯಶಸ್ಸು, ಮನೆ, ಗಜಕುಂಭ, ವ್ರತ, ಶುದ್ಧಿ, ಗರ್ಭ ಧರಿಸುವುದು, ಮುಕ್ತಾಯ, ಬೇಟೆ, ಏಕವಚನ ಸಂಬೋಧನೆ, ಪದ, ಆಲಿಸುವುದು, ಮಾತನಾಡುವುದು, ನದಿದಂಡೆ ಅಥವಾ ತೀರ, ವಂಶ, ಮುಖ, ಪುರುಷ, 'ನಾವು' ಎನ್ನಲು, ವಿರೋಧ, ಹುಡುಗ, ಆದಿ, ಮುಂಗುಸಿ, ಕಾಲ ಸರಿದುಹೋಗುವುದು. ಉಳಿದಂತೆ ಕಥಕಳಿಯ ಮಿಶ್ರ ಹಸ್ತಗಳಲ್ಲೂ ಹಂಸಪಕ್ಷವೆಂಬ ಕರ್ತರೀಮುಖ ಹಸ್ತ ವ್ಯಾಪಕ ಬಳಕೆಯಾಗುತ್ತದೆ. ಕಥಕಳಿಯಲ್ಲಿ ಹಂಸಪಕ್ಷವೆಂದು ಕರೆಸಿಕೊಳ್ಳುವುದು ಅಭಿನಯದರ್ಪಣದ ಅರ್ಧಚಂದ್ರ ಹಸ್ತ.

**ಒಡಿಸ್ಸಿಯ** ಹಂಸಪಕ್ಷವು ಮೃಗಶೀರ್ಷ ಹಸ್ತವಾಗಿದೆ. ಅಂತೆಯೇ ಹಂಸಪಕ್ಷಕ್ಕೆ ಮೃಗಶೀರ್ಷವೆಂಬ ಹೆಸರಿದೆ. ಅಲ್ಲಿನ ಕರಣಪ್ರಕಾರಗಳ ಪೈಕಿ ಬರುವ ಗೋಪನ ಎಂಬ ಚಲನೆಯಲ್ಲಿ ಧ್ವಜ ಮತ್ತು ಹಂಸಪಕ್ಷ್ಯವೆಂಬ ಮೃಗಶೀರ್ಷದ ಬಳಕೆಯಿದೆ. ✧

# ದರ್ಪಣ

## ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣೀ

**ಕಳೆದ ಸಂಚಿಕೆಯಲ್ಲಿ..**



*(ಸಂಸ್ಕೃತ ಕಾವ್ಯಗಳನ್ನು ದೃಶ್ಯಾತ್ಮಕವಾಗಿ ಪುನರ್‌ನಿರ್ಮಾಣ ಮಾಡುವಲ್ಲಿ ರುಕ್ಮಿಣೀಯವರಿಗೆ ಆಸಕ್ತಿ ಹೆಚ್ಚು. ಅದಕ್ಕೆ ಸಾಕಷ್ಟು ಓದು ಕೂಡಾ ನೆರವು ನೀಡಿತ್ತು. ನೃತ್ಯದ ವಸ್ತುವಿಗೆ, ಸಂಯೋಜನೆಗೆ ಅನುಕೂಲವಾಗುವಂತೆ ಪಠ್ಯವನ್ನು ತಯಾರಿಸಿ ನಿರ್ವಹಣೆಯ ಪೂರ್ಣ ಜವಾಬ್ದಾರಿಯನ್ನು ರುಕ್ಮಿಣಿಯವರ ಸಹವರ್ತಿಗಳು ಹಂಚಿಕೊಳ್ಳುತ್ತಿದ್ದರು. ಕಾಳಿದಾಸನ ಕುಮಾರಸಂಭವಂನ್ನು ಕೈಗೆತ್ತಿಕೊಂಡ ರುಕ್ಮಿಣೀದೇವಿ ಶಿವ-ಪಾರ್ವತಿಯರ ಪಾತ್ರಗಳಲ್ಲಿ ಕಾವ್ಯದ ಶಕ್ತಿಯನ್ನು ತೋರಿಸಿಕೊಟ್ಟರು. ಅದಕ್ಕೆ ನೆರವಾದದ್ದು ಅವರ್ಣನೀಯವೆನಿಸುವ ಭಾವೋತ್ಪತ್ತಿ ಮತ್ತು ರಸದ ನಿರೂಪಣೆ. ಈ ಹಿನ್ನಲೆಯ ಜೊತೆಗೆ ರುಕ್ಮಿಣೀ ತಕ್ಕಮಟ್ಟಿಗೆ ಕೇರಳದ ಕಥಕಳಿ ಮತ್ತು ಕೂಡಿಯಾಟ್ಟಂನಿಂದಲೂ ಪ್ರಭಾವಿತರಾಗಿದ್ದರು. ಕಲಾಕ್ಷೇತ್ರದ ಪ್ರಾರಂಭಿಕ ದಿವಸಗಳಲ್ಲಿ ರುಕ್ಮಿಣೀ ತಮ್ಮ ವಿದ್ಯಾರ್ಥಿಗಳಿಗೆ ಭರತನಾಟ್ಯದೊಂದಿಗೆ ಕಥಕಳಿಯನ್ನು ಕಲಿಯುವಂತೆ ಕಡ್ಡಾಯಗೊಳಿಸಿದ್ದರು.*

*ಆದರೆ ರುಕ್ಮಿಣೀಯವರ ಬಹುಪಾಲು ಸಂಯೋಜನೆಗಳು ನಾಟ್ಯಶಾಸ್ತ್ರದ ಆತ್ಮಕ್ಕೆ, ಅದು ಹೇಳುವ ಸಿದ್ಧಾಂತ ನಿಯಮಗಳಿಗೆ ಅನುರೂಪವಾಗಿ ಇರಲಿಲ್ಲ; ಬದಲಾಗಿ ಕಂಡೂ ಕಾಣದಂತೆ ನಿರ್ಲಿಪ್ತ ಮಾರ್ಗವನ್ನು ಅನುಸರಿಸುತ್ತಿದ್ದವು. ಹಾಗಾಗಿ ಕಲಾಕ್ಷೇತ್ರದ ಸಂಯೋಜನೆಗಳಲ್ಲಿ, ಅಭಿನಯದಲ್ಲಿ ಅಗತ್ಯವಿರುವೆಡೆ ಜಾನಪದವನ್ನೂ ತಕ್ಕಮಟ್ಟಿಗೆ ಅಳವಡಿಸಿಕೊಳ್ಳಲಾಗಿದ್ದು ಕ್ಲಾಸಿಸಿಸಂನ ಪ್ರಭಾವವೇ ಹೆಚ್ಚು. ಆದರೆ ಈ ಮೂಲಕವಾಗಿ ನಾಟ್ಯಶಾಸ್ತ್ರವನ್ನು ಮತ್ತಷ್ಟು ಆಳವಾಗಿ ಅರ್ಥ ಮಾಡಿಕೊಳ್ಳಲು, ಸಹಾಯವಾಗಿ ಕೊರವಂಜಿಯಂತಹ ಜಾನಪದೀಯ ನೆಲೆಗಳು ಶಾಸ್ತ್ರೀಯವಾಗಿಯೂ, ಸಂಸ್ಕೃತೀಕರಣವಾಗಿಯೂ ನೆಲೆ ಪಡೆದುದರ ಹಿನ್ನಲೆ ಅರ್ಥವಾಗುತ್ತದೆ. )*

**ಕಾ**ಳಿದಾಸನ ಕುಮಾರಸಂಭವಂ ರೂಪಕವಾಗಿ ಮೊದಲು ಪ್ರದರ್ಶನ ಕಂಡದ್ದು 1947ರ ಸೆಪ್ಟೆಂಬರ್ 30ರಂದು ಜರುಗಿದ ಬೆಸೆಂಟ್ ಶತಮಾನೋತ್ಸವ ಆಚರಣೆಯಲ್ಲಿ. ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾಗಿ ನೇತೃತ್ವ ವಹಿಸಿದ್ದವರು ಸ್ವತಃ ರುಕ್ಮಿಣಿ. ಅಂದಿನ ಸಂಭ್ರಮಕ್ಕೆ ಮಹಾತ್ಮಾ ಗಾಂಧಿ ಮೊದಲಾದವರಿಂದ ಹೃತ್ಪೂರ್ವಕ ಸಂದೇಶ ರುಕ್ಮಿಣೀ ಪಾಲಿಗಿತ್ತು.

ಕಾಳಿದಾಸನ ಸಮೃದ್ಧ ಸಾಹಿತ್ಯದಲ್ಲಿ ಯಾವುದನ್ನು ಆರಿಸಬೇಕು, ಯಾವುದು ಬಿಡಬೇಕು ಎಂಬುದು ಎಲ್ಲರಿಗೂ ಗೋಜಲು. ಆಗ ರುಕ್ಮಿಣಿ ಅವರಿಗೆ ಆಪ್ತರಾಗಿದ್ದ ಶಂಕರ್ ಮೆನನ್ ಪ್ರವಾಸಕ್ಕೆಂದು ವಿದೇಶಕ್ಕೆ ಹೋದವರು ಅಸ್ವಸ್ಥರಾಗಿ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಈ ನೃತ್ಯರೂಪಕಕ್ಕೆ ಅವರ ಸಹಕಾರ ಸಾಧ್ಯವಾಗಿರಲಿಲ್ಲ. ಈ ನಡುವೆ ಸಾಹಿತ್ಯವನ್ನು ನೃತ್ಯಾಭಿವ್ಯಕ್ತಿಗೆ ತಕ್ಕಂತೆ ವಿಭಾಗಿಸುವ ಪ್ರಕ್ರಿಯೆಯೇ ಟೈಗರ್ ವರದಾಚಾರ್ಯ, ಎಸ್. ವೆಂಕಟಾಚಲಶಾಸ್ತ್ರಿ, ಬಿ. ಎಸ್. ಆದಿನಾರಾಯಣ ಶರ್ಮ ಮುಂತಾದ ವಿದ್ವಾಂಸರಿಗೆ ಗೋಜಲಿಗಿಟ್ಟುಕೊಂಡಿತ್ತು.

ಟೈಗರ್ ವರದಾಚಾರ್ಯರು ಸಾಹಿತ್ಯವನ್ನು ತೆಲುಗಿಗೆ ಅವತರಣಿಕೆ ಮಾಡಿದರು. ಅದಕ್ಕೆ ತಕ್ಕಂತೆ ನೃತ್ಯ ಸಂಯೋಜಿಸುವ ಸಾಮರ್ಥ್ಯ ರುಕ್ಮಿಣಿಯವರಿಗಲ್ಲದೆ ಉಳಿದವರ್ಯಾರಿಗೂ ಇರಲಿಲ್ಲ. ಆದರೆ ಸಂಗೀತ ಸಂಯೋಜನೆಯ ಸಮಯಕ್ಕೆ ಸರಿಯಾಗಿ ಟೈಗರ್ ವರದಾಚಾರ್ಯರಿಗೆ ಹೊಟ್ಟೆನೋವು, ಸೆಕೆಗುಳ್ಳೆಗಳೆದ್ದು ಕಷ್ಟಪಡುವಂತಾಗಿತ್ತು. ಹಾಗಾಗಿ ಪ್ರದರ್ಶನ ಹಿಂದಿನ ದಿನದವರೆಗೂ ಸಂಗೀತ, ನೃತ್ಯ ಸಂಯೋಜನೆಗಳು ನಡೆಯುತ್ತಲೇ ಇದ್ದವು. ರುಕ್ಮಿಣಿ ದೇವಿ ಸಂಯೋಜನೆಯನ್ನು ಬೆಳಗ್ಗೆಯೂ, ಅದಕ್ಕೆ ತಕ್ಕ ಪೂರ್ವ ತಯಾರಿಯನ್ನು ಸಂಜೆಯೂ ಮಾಡುತ್ತಿದ್ದರು.


ಪಾರ್ವತಿಯಾಗಿ ರುಕ್ಮಿಣೀದೇವಿ

ರುಕ್ಮಿಣಿ 5 ಮಂದಿ ವಿದ್ಯಾರ್ಥಿಗಳನ್ನು ಮುಂದಿರಿಸಿ ಕೊಂಡು ನೃತ್ಯಸಂಯೋಜನೆಗೆ ಆರಂಭಿಸಿದರು. ಇಡೀ ನೃತ್ಯ ರೂಪಕದ ಕೇಂದ್ರವಾಗಿ ಶಿವನ ಸ್ತುತಿಯಾಗಿ ಆತನ ಮಹಿಮೆಯನ್ನು ಮೇಲು ಗತಿಯಲ್ಲಿ ಹೊಗಳುವುದಾಗಿರಬೇಕು ಎಂದು ರುಕ್ಮಿಣಿ ಇಚ್ಛೆ. 10 ಸಾಲುಗಳ ಶ್ಲೋಕದಲ್ಲಿ ಹಿಮಾಲಯದ ಭವ್ಯ ವರ್ಣನೆಯಿರಬೇಕೆಂದು ರುಕ್ಮಿಣಿ ಹೇಳಿದ್ದರು. ತಾನಂ ಬಳಸಿ ಯಾವುದೇ ವಿಶೇಷ ಹಿನ್ನಲೆ ಮತ್ತು ವಾದ್ಯಗಳ ಸಹಕಾರವಿಲ್ಲದೆ ಈ ವರ್ಣನೆಯ ಸಾಲುಗಳಿದ್ದವು. ಹಾಗಾಗಿ ಮೊದಲು ಅಪ್ಸರೆಯರ ನೃತ್ಯ. ಘನ ರಾಗ ಮತ್ತು ಮೃದಂಗದ ದನಿಗಳಲ್ಲಿ ಶಿವನಪೂಜೆ.

ನಂತರ ಪಾರ್ವತಿಯ ಜನನವೆಂಬುದು ಪದಂ ಶೈಲಿಯಲ್ಲಿರಬೇಕೆಂದು ರುಕ್ಮಿಣಿ ತಮ್ಮ ಶಿಷ್ಯೆ ಶಾರದಾ ಪಾರ್ವತಿಯನ್ನು ಸ್ತುತಿಸುವುದನ್ನು ಸಂಯೋಜಿಸಿದರು. ರೂಪಕದ ಉದ್ದಕ್ಕೂ ಆಗಾಗ ಹಿನ್ನಲೆಯಿಂದ ಸಮೂಹದಲ್ಲಿ ಸಾಹಿತ್ಯ, ಶ್ಲೋಕಗಳನ್ನು ಹೇಳುವುದಿತ್ತು.

ಎರಡನೇ ಸನ್ನಿವೇಶದಲ್ಲಿ ಇಂದ್ರ ಬ್ರಹ್ಮನಲ್ಲಿ ಬಂದು ತಾರಕಾಸುರನ ಉಪಟಳ ನಿವಾರಣೆಗೆ ಕೇಳಿಕೊಳ್ಳುವುದು; ಅದಕ್ಕೆ ಬ್ರಹ್ಮನ ಉತ್ತರ. ಕಥಕಳಿಯ ಹಿರಿಯ ಗುರು ಕೆ. ಚಂದು ಪಣಿಕ್ಕರ್ ಬ್ರಹ್ಮನಾಗಿ, ಡಿ. ಪಶುಪತಿ ಇಂದ್ರನಾಗಿ ಅದ್ಭುತ ಅಭಿನಯ. 3ನೇ ಸನ್ನಿವೇಶದಲ್ಲಿ ಸಿ. ವಿ ಚಂದ್ರಶೇಖರ್ ಮನ್ಮಥನಾಗಿ; ಸನ್ನಿವೇಶಕ್ಕೆ ಪೂರಕವಾಗಿ ಮನ್ಮಥ ಸೃಜಿಸುವ ವಸಂತಕಾಲದ ವರ್ಣನೆಯನ್ನು ಸಖಿಯರು ಪಾರ್ವತಿಗೆ ಮಾಡುವುದು. ತದನಂತರ ಮನ್ಮಥನ ಬಾಣ ಪ್ರಯೋಗ, ಮನ್ಮಥ ದಹನ, ಪಾರ್ವತಿಯೆಡೆಗೆ ಶಿವನ ಆಕರ್ಷಣೆ.

5ನೇ ಸನ್ನಿವೇಶ ಶಿವನ ಮಾರುವೇಷ; ಪ್ರಶ್ನೋತ್ತರ. ಶಿವನ ಬಗ್ಗೆ ಛೇಡಿಸಿದಾಗ ಪಾರ್ವತಿಯ ಪ್ರತಿಕ್ರಿಯೆ, ಕೋಪ ಕೊನೆಗೆ ಶಿವನಾಗಿ ನಿಂತು ಪಾರ್ವತಿಯ ಮನೋಭಿಲಾಷೆಗೆ ಸ್ಪಂದನ. ಮಾರುವೇಷದವನಾಗಿ ಗುರು ಚಂದು ಪಣಿಕ್ಕರ್, ಶಿವನಾಗಿ ಹಿರಿಯ ವಿದ್ಯಾರ್ಥಿ ರಾಜಾಮಣಿಯರದ್ದು ಉತ್ತಮ ಅಭಿವ್ಯಕ್ತಿ. 6ನೇ ಸನ್ನಿವೇಶದಲ್ಲಿ ಶಿವ ಪಾರ್ವತಿ ಕಲ್ಯಾಣ. ಅದಕ್ಕೆ ತಕ್ಕ ಮೆರವಣಿಗೆ, ಅಪ್ಸರೆಯರಿಂದ ತಿಲ್ಲಾನ ನೃತ್ಯ. ಕೊನೆಯ ಸನ್ನಿವೇಶ ವಿವಾಹ ಮತ್ತು ಕುಮಾರ ಸಂಭವ. ತಿಲ್ಲಾನ ಧರುಗಳೊಂದಿಗೆ ರೂಪಕ ಮುಕ್ತಾಯ. ಇದಿಷ್ಟೂ ಕುಮಾರಸಂಭವಂನ ಸಂಯೋಜನಾ ವೈಖರಿ.

ಇನ್ನೇನು ಪ್ರದರ್ಶನಕ್ಕೆ ಎರಡು ದಿನವಷ್ಟೇ ಉಳಿದಿದೆ ಎನ್ನುವಾಗ ವಸ್ತ್ರವಿನ್ಯಾಸಗಳನ್ನು ಪರೀಕ್ಷಿಸಿದ ರುಕ್ಮಿಣಿ ಅವು ಯಾವುದೂ ಸರಿಯಾಗಿ ಹೊಂದುವುದಿಲ್ಲವೆಂದು ಮನಗಂಡರು. ಎಲ್ಲರಿಗೂ ಪೀಕಲಾಟಕ್ಕಿಟ್ಟುಕೊಂಡಿತು. ಆದರೆ ಇರುವ ಕೆಲವೇ ಕೆಲವು ಗಂಟೆಗಳಲ್ಲಿ ಪುರಾಣಕ್ಕೆ ಸಂಬಂಧಿಸಿದಂತೆ ಸರಳವೆನಸುವ ಶೋಭಾಯಮಾನವಾದ ಉಡುಗೆಗಳನ್ನು ತಮ್ಮ ನುರಿತ ಹೊಲಿಗೆಯರಿಂದ ಹೊಸದಾಗಿ ವಿನ್ಯಾಸ ಮಾಡಿಸಿದ್ದು ರುಕ್ಮಿಣಿಯವರ ಹೆಚ್ಚುಗಾರಿಕೆ.

ಕಿಕ್ಕಿರಿದು ತುಂಬಿತ್ತು ಸಭಾಂಗಣ. ಪರದೆ ಸರಿದ ತಕ್ಷಣ ಪಾರ್ವತಿಯೇ ಭುವಿಗಿಳಿದು ಬಂದಿರುವಳೇ ಎಂಬಷ್ಟರ ಮಟ್ಟಿಗಿನ ಅದ್ಭುತ ಎಂಬ ಕಲ್ಪನೆ. ಎಲ್ಲರ ಮೈಯಲ್ಲೂ ವಿದ್ಯುತ್ಸಂಚಾರ. ಕಾಳಿದಾಸನ ಕಾವ್ಯ ಜೀವಂತವಾದಂತೆ ಅನಿಸಿತ್ತು. 'ಸಾಕ್ಷಾತ್ ಪಾರ್ವತಿಯೇ ಧರೆಗಿಳಿದು ಬಂದು ಶಿಲ್ಪವಾಗಿ ನಿಂತಂತೆ ಭಾಸವಾಯಿತು. ತಕ್ಷಣವೇ ಆ ಶಿಲ್ಪಕ್ಕೆ ರಕ್ತ ಮಾಂಸಗಳು ತುಂಬಿ ಬಂದಂತ ಅನುಭವ ನಮಗಾಯಿತು.' ಎಂದು ನೆನಪಿಸಿಕೊಳ್ಳುತ್ತಾರೆ ಕಪಿಲಾ ವಾತ್ಸ್ಯಾಯನ.

'ಪುರಾಣವನ್ನೇ ಕಲ್ಪನೆಗೆ ತರುವ ವೇಷ–ಭೂಷಣ, ಪುರಾಣದ ಸಮಯವನ್ನೇ ತಂದಿಡುವಂತಹ ಹಿಮಾಲಯದ ಸನ್ನಿವೇಶ, ಹಿಮಾಲಯದಿಂದ ದೇವರುಗಳೇ ಇಳಿದು ಬಂದ ಕಲ್ಪನೆ, ಹಿಮಾಲಯದಲ್ಲಿ ನಾವು ಕಾಲಿಟ್ಟೆವೋ ಎಂಬ ಭಾವ, ಯಾವುದೇ ಕೊರತೆಗಳಿಲ್ಲದ ನೃತ್ಯರೂಪಕ' ಎಂಬಿತ್ಯಾದಿಯಾಗಿ ಪತ್ರಿಕೆಗಳು ಶ್ಲಾಘಿಸಿದ್ದವು. ರೂಪಕದ ಜನಪ್ರಿಯತೆಯಿಂದಾಗಿ ಎರಡು ದಿನಗಳೊಳಗೆ ಅಡೆಯಾರ್‌ನಲ್ಲಿ ಅಕ್ಟೋಬರ್ 2 ರಂದು ಕುಮಾರ ಸಂಭವಂ ಅನ್ನು ಕಲಾವಿದರು ಪುನಃ ನರ್ತಿಸಿದರು. ರೂಪಕದಿಂದ ಪ್ರಭಾವಿತವಾದ ಭಾರತ ಸರ್ಕಾರ 1950ರ ಮೊದಲ ಗಣರಾಜ್ಯೋತ್ಸವಕ್ಕೆ ಪ್ರದರ್ಶನ ನೀಡಲು ನವದೆಹಲಿಗೆ ಆಹ್ವಾನಿಸಿತ್ತು!

**(ಸಶೇಷ)**






## ಹಳೆ ಕಲಾವಿದರುಗಳೆಂದರೆ ರೋಚಕ ಕಥೆಗಳ ತಾಣ !

* ರಾಕೇಶ್‌ಕುಮಾರ್ ಕಮ್ಮಜೆ

ತಿಟ್ಟು ಲೆಕ್ಕಾಚಾರವನ್ನು ಬದಿಗಿಟ್ಟು, ಒಟ್ಟೂ ಯಕ್ಷಗಾನದ ಗತ ಇತಿಹಾಸವನ್ನು ಕೆದಕಿ, ಯಕ್ಷಲೋಕದ ರಂಗಸ್ಥಳವನ್ನು ಪ್ರವೇಶಿಸಿ ನಿಂತರೆ ಅಸಂಖ್ಯ ಮೇರುಕಲಾವಿದರು ಧೀಂಗಿಣ ಹಾಕುತ್ತಿರುತ್ತಾರೆ. ಒಬ್ಬೊಬ್ಬ ಕಲಾವಿದನೂ ಅಚ್ಚರಿಯ ತಾಣ. ಕಳೆದ ಕೆಲವಾರು ದಿನಗಳಿಂದ ದಶಕಗಳ ಹಿಂದೆಯೇ ಸಂದು ಹೋದ ಕಲಾವಿದರ ರೋಚಕ ಕಥೆಗಳನ್ನು ಕೇಳಿಸಿಕೊಳ್ಳುತ್ತಿದ್ದೇನೆ. ಅವರ ಆಟದ ಆ ಕಥೆಗಳನ್ನು ಹಗಲಿನಲ್ಲಿ ಕೇಳಿ, ರಾತ್ರಿ ಮಲಗಿದಾಗ ಮನಸಿನ ಅಂಗಳದಲ್ಲಿ ಅವರದೇ ಕುಣಿತ, ಅವರದೇ ಎನಸುವ ಅರ್ಥಗಾರಿಕೆ! ಥಕ್ಕನೆ ಎಚ್ಚರಾದರೆ ಬರೀ ನಿರಾಸೆ! ಎಂಥೆಂಥ ಕಲಾವಿದರುಗಳನ್ನು ಯಕ್ಷಭೂಮಿಗೆ ಕೊಟ್ಟಿದ್ದಾಳೆ ಸ್ವಾಮೀ ನಮ್ಮ ಕನ್ನಡ ಭುವನೇಶ್ವರಿ!

ನಿಮಗೆ ಮುಳಿಯಾಲ ಕೇಶವ ಭಟ್ ಅನ್ನುವ ಕಲಾವಿದನ ಬಗೆಗೆ ಹೇಳಬೇಕು. (ಮುಳಿಯಾಲ ಅಂದರೆ ದಕ್ಷಿಣ ಕನ್ನಡದ ವಿಟ್ಲಕ್ಕೆ ಸಮೀಪವಿರುವ ಅಡ್ಯನಡ್ಕದ ಒಂದು ಊರು) "ಓ ಅವ್ರಾ, ಗೊತ್ತು ಗೊತ್ತು" ಅಂತ ಯೋಚಿಸದೆ ಹೇಳಿಬಿಟ್ಟೀರಿ ಹುಷಾರು. ಯಾಕೆಂದರೆ ಅವರು ಅಸ್ತಂಗತರಾಗಿಯೇ ಸುಮಾರು ಅರ್ಧ ಶತಮಾನಗಳಾದವೇನೊ. ಹೆಚ್ಚು ಕಮ್ಮಿ 55–60ರ ಇಸವಿಗಾಗಲೇ ಅವರು ಇತಿಹಾಸವಾಗಿದ್ದರು!

ಕೇಶವ ಭಟ್ಟರ ಗದಾಯುದ್ಧದ ಭೀಮನಿಗೆ ಸಾಟಿಯೇ ಇಲ್ಲ, ಅವರ ಭೀಮನನ್ನು ನೋಡಿದರೆ ಮತ್ತೆ ಕೆಲವು ದಿನ ನಿದ್ದೆಯೇ ಸುಳಿಯದು ಅನ್ನುವ ಹಿಂದಿನವರ ಮಾತು ತುಸು ಅತಿಶಯೋಕ್ತಿಯಾಯಿತೇನೋ ಎಂದೆನಿಸಿದರೂ, ಜೊತೆಜೊತೆಗೇ ಆ ಭೀಮನ ಭೀಕರತೆಯೂ, ವ್ಯಾಪಕತೆಯೂ ಅರ್ಥವಾಗತೊಡಗುತ್ತದೆ. ಹಿರಿಯ ಯಕ್ಷಕಲಾಭಿಮಾನಿಗಳಲ್ಲಿ "ನಿಮ್ಮ ಪ್ರಕಾರ ಭೀಮನ ಪಾತ್ರಕ್ಕೆ ಸೈ ಅನಿಸುವ ಕಲಾವಿದ ಯಾರು?" ಅಂತ ಕೇಳಿದರೆ 'ಮುಳಿಯಾಲ ಕೇಶವ ಭಟ್ ಅಂತ ಹಿಂದೆ ಇದ್ರು' ಅಂತಲೇ ಶುರುವಿಟ್ಟುಕೊಳ್ಳುತ್ತಾರೆ! ಅಂಥಹ ಭೀಮ, ಭಟ್ಟರದು.

ಹಾಗಂತ ಅವರು ಭೀಮನ ಪಾತ್ರಕ್ಕೆ ಮಾತ್ರ ಸೀಮಿತರು ಅಂತಲ್ಲ. ಬೇರೆ ಬೇರೆ ಪಾತ್ರಗಳಿಗೂ ಅವರು ಹೊಂದಿಕೆಯಾಗುತ್ತಿದ್ದರು. ಆ ಪಾತ್ರಗಳಿಗೆ ಜೀವತುಂಬುತ್ತಿದ್ದರು. ದೇವಿ ಮಹಾತ್ಮೆಯ ಚಂಡ–ಮುಂಡ ಎರಡೂ ಪಾತ್ರಗಳು, ರಕ್ತಬೀಜ, ದೂರ್ವಾಸ, ಇಂದ್ರಜಿತು, ಅರ್ಜುನ ಮೊದಲಾದ ಪಾತ್ರಗಳಲ್ಲೂ ಮಿಂಚಿದವರು. ಭಟ್ಟರ ಎಲ್ಲಾ ಪಾತ್ರಗಳಲ್ಲೂ ಎದ್ದು ಕಾಣುತ್ತಿದ್ದ ಸಮಾನ ಅಂಶವೆಂದರೆ – ಗತ್ತುಗಾರಿಕೆ. ಅವರ ಪಾತ್ರವೈವಿಧ್ಯದಲ್ಲಿ ಗತ್ತೇ ಗಮ್ಮತ್ತು ಎನ್ನುತ್ತಾರೆ ಬಲ್ಲವರು.

ಅಂದಹಾಗೆ ಕೇಶವ ಭಟ್ಟರಲ್ಲಿ ಯಕ್ಷಗಾನಕ್ಕೆ ಹೊರತಾದ ಇನ್ನೊಂದು ವಿಶೇಷ ಕಲೆಯೂ ಅಡಕವಾಗಿತ್ತು. ಹೌದು, ಅವರು ಆ ಕಾಲದ ಪ್ರಸಿದ್ಧ ಮಂತ್ರವಾದಿಯೆಂದೇ ಹೆಸರಾದವರು!

ಹಾಂ, ನಿಮಗೊಂದು ವಿಸ್ಮಯ ಸಂಗತಿಯನ್ನು ಹೇಳಬೇಕು. ಕರ್ನಾಟಕ–ಕೇರಳದ ಗಡಿಪ್ರದೇಶ ಮುಳಿಗದ್ದೆ ನಿಮಗೆ ಗೊತ್ತಿರಬಹುದು. ಅದೆಷ್ಟೋ ದಶಕಗಳಿಂದ ಅಸಂಖ್ಯಾತ ಯಕ್ಷಗಾನ ಪ್ರಸಂಗಗಳಿಗೆ ಸಾಕ್ಷಿಯಾದ ಪ್ರದೇಶ ಅದು. ಅಲ್ಲೇ ಸಮೀಪದಲ್ಲಿ ಭೂತಸ್ಥಾನವೂ ಇದೆ. ಅಲ್ಲಿಗೆ ಬದಿಯಾರು ಅಂತ ಹೆಸರು. ಎಷ್ಟೋ ಮೇಳಗಳು ಮುಳಿಗದ್ದೆಯಲ್ಲಿ ಯಕ್ಷಗಾನವನ್ನು ಸಾಕ್ಷಾತ್ಕರಿಸಿದ್ದರೂ ಆ ಭೂತಸ್ಥಾನದ ಮುಂದೆಯೇ ಆಟ ಆಡುವ ಸಾಹಸವನ್ನು ಯಾರೂ ತೋರಿರಲಿಲ್ಲ. ಅದಕ್ಕೆ ಕಾರಣವೂ ಇತ್ತು. ಭೂತಸ್ಥಾನದ ಮುಂದೆಯೇ ಪ್ರಸಂಗ ಆಡಿದರೆ ಉಪದ್ರವ ಕಾಣಿಸಿಕೊಳ್ಳುತ್ತದೆ ಎಂಬ ಪ್ರತೀತಿ ಪ್ರಚಲಿತವಾಗಿತ್ತು. ಆದರೆ ಅದೊಂದು ಬಾರಿ ಯಾರು ಧೈರ್ಯ ಮಾಡಿದರೋ ಗೊತ್ತಿಲ್ಲ. ದೇವಿ ಮಹಾತ್ಮೆ ಯಕ್ಷಗಾನವನ್ನು ಅಲ್ಲೇ ಆಡುವುದು ಅಂತ ಕಲಾವಿದರುಗಳು ತೀರ್ಮಾನಿಸಿದರು.

ಸರಿ, ಪ್ರಸಂಗ ಶುರುವಾಯಿತು. ಮಧ್ಯರಾತ್ರಿ ಕಳೆಯುವವರೆಗೆ ಎಲ್ಲವೂ ಸರಿಯಾಗಿಯೇ ಇತ್ತು. ಯಾವಾಗ ಚಂಡ ಮುಂಡರ ವಧೆಗಾಗಿ ದೇವಿ ಹೊರಟಳೋ ಪರಿಸ್ಥಿತಿ ಹದಗೆಡತೊಡಗಿತು! ಇದ್ದಕ್ಕಿದ್ದಂತೆ ದೇವಿ ಪಾತ್ರಧಾರಿಗೆ ಒಂದೇ ಸಮನೆ ದರ್ಶನ!

ಇತ್ತ ಚೌಕಿಯಲ್ಲಿ ಕೇಶವ ಭಟ್ಟರ ರಕ್ತಬೀಜ ಗೆಜ್ಜೆ ಕಟ್ಟುತ್ತಿದ್ದ. ಯಾರೋ ಒಳಗೆ ಓಡಿ ದೇವಿಯ ದರ್ಶನದ ಬಗೆಗೆ ಭಟ್ಟರಿಗೆ ತಿಳಿಸಿದರು. ಕೂಡಲೇ ಭಟ್ಟರು ಅಲ್ಲೆಲ್ಲಿಂದಲೋ ಒಂದಷ್ಟು ಭಸ್ಮ ಹಿಡಿದವರೇ ಪ್ರವೇಶ ದ್ವಾರದಲ್ಲಿ ನಿಂತು ಆ ಭಸ್ಮವನ್ನು ದೇವಿ ಪಾತ್ರಧಾರಿಯ ಮೇಲೆ ಎಸೆದರು. ದರ್ಶನ ನಿಂತಿತು, ಮತ್ತೆ ನಡೆದದ್ದು ಯಕ್ಷಗಾನ ಪ್ರದರ್ಶನ ಮಾತ್ರ! ಹೀಗೆ ಕೇಶವ ಭಟ್ಟರ ಮಂತ್ರವಾದಕ್ಕೂ ಆ ಪ್ರಸಂಗ ಸಾಕ್ಷೀ'ಭೂತ'ವಾಯಿತು.

ಮಂತ್ರವಾದಿ ಅನ್ನುವುದನ್ನು ಮರೆತು ಮಾತನಾಡಿದರೂ ಕೇಶವ ಭಟ್ಟರು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕಾದ ಕಲಾವಿದ. ಗತಿಸಿಹೋಗಿ ಅರ್ಧ ಶತಮಾನವೇ ಆಗಿಹೋದರೂ, ಇನ್ನೂ ಜನಮಾನಸದಲ್ಲಿ ಅವರ ಹೆಸರು ಉಳಿದಿದೆ ಮತ್ತು ಭೀಮ, ರಕ್ತಬೀಜ... ಅಂದುಕೊಳ್ಳುವಾಗಲೆಲ್ಲಾ ಅವರು ನೆನಪಾಗುತ್ತಾರೆ ಎನ್ನುವುದೇ ಅವರ ಪಾತ್ರಕ್ಕೆ ಸಿಕ್ಕಿರುವ ಬಹುದೊಡ್ಡ ಪ್ರಮಾಣಪತ್ರ! ಅದುವೇ ಕಲಾವಿದನೊಬ್ಬನ ಸಾರ್ಥಕ್ಯ. ಅರಸಲು ಹೊರಟರೆ ಅಡಿಗಡಿಗೂ ಶ್ರೇಷ್ಠರೆನಿಸಿದ ಕಲಾವಿದರು ಕಾಣಸಿಗುತ್ತಾರೆ. ಅವರ ಕಥೆಗಳನ್ನು ಕೇಳುತ್ತಿದ್ದರೆ ಅವರೇ ದೊಡ್ಡ ಪ್ರಸಂಗವೆನಿಸುತ್ತಾರೆ!

**(ಕಳೆದ ಸಲದ ಸಂಚಿಕೆಯಲ್ಲಿ 'ರಂಗಸ್ಥಳ'ದ ಅಂಕಣಕಾರ ಕಮ್ಮಜೆಯವರ ಹೆಸರು ಕಣ್ತಪ್ಪಿನಿಂದ ಬಿಟ್ಟುಹೋಗಿದ್ದಕ್ಕೆ ವಿಷಾದಿಸುತ್ತೇವೆ.–ಸಂ)**

✧

# ಒಳನೋಟ

- **30th Oct:** Bhushans' will be performence at IDA-RASA fest. Venue: ADA Rangamandira, Bangalore.
- **31st Oct:** Rangapravesham Maithri Rao; Disciple of Bhushan's, Mysore. Venue: Jaganmohana Palace, Mysore.
- **20th Nov:** As part of the Gudee sambhrama Ms. Prateekasha Kashi present a solo Kuchipudi Recital billed as Navsandhi. Venue: V V Puram Circle, Bangalore
- **21st Nov:** 'Janani Janma Bhoomischa" is a celebration event, by Shambhavi Dance Ensemble. Place: JSS Auditorium, Jayanagar, Bangalore.
- **25th Nov:** Padmaja Suresh received National excellence 2010 -Kiran achievement award [for classical dance] presented by Women's International Network at Teenmurthi Bhavan, Newdelhi.
- **1st Dec:** Sai art international's Sai Nrityotsav - 19. Bharatha Natyam by Rashmi Aggarwal, Delhi ; Sumitra Chakraborthy, Kolkatta ; Sindhoor Panagal, Bangalore, Odissi by Guru Sharmila Mukherjee and her disciples Shweta Krishna, Shubha Nagarajan, Sonira Gulhati.; Dance-drama Kusha by Articulate and sai arts international.
- **3rd, 4th and 5th Dec:** National dance festival 2nd "Sai Nrityotsav". Place: Music Academy Mini Hall, Chennai.
- **10th Dec:** Dance performance by Padmaja Suresh at Laadli media awards at Chowdiah hall, Vyalikaval, Bangalore.
- **18th and 19th Dec:** Workshop in Contemporary by Sudarshan Chakravorty from Kolkatta; concluding with a grand performance on 19th December. Venue: Ambience of Shambhavi Dance Theatre, Kengeri Satellite town, Bangalore.
- **18th Dec:** Arangetram of Indu M B, Disciple of Padmaja Suresh, Aatmalaya (Regd.) [earlier known as Kalpataru Kalavihar] Venue : Unnati centre, Temple Road, Sadananda Nagar, NGEF East, Bangalore-38
- Nebbur Narayana Hegde, Bhaskara Kogga Kamath, K.V.Ramesh, Balipa Narayana Bhagavata, K Gopalakrishna Bhat and Gopalakrishna ( **Yakshagana) ;** Vyjayanthi Kashi, Jilan Basha and Sujata Rajgopal (Dance ) beamed in joy for the prestigious annual **Karnataka Rajyotsava Award**. Congratulations!
- **ಡಿಸೆಂಬರ್ 10 :** ಡಾ. ಅಮೃತ ಸೋಮೇಶ್ವರ ಮತ್ತು ಹೊಸ್ತೋಟ ಮಂಜುನಾಥ ಭಾಗವತರಿಗೆ ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯ 2009–10 ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿ ಪ್ರದಾನ, ಸ್ಥಳ : ಮಲ್ಲಿಕಾರ್ಜುನ ಮತ್ತು ಕೋಟೆ ಶ್ರೀ ವೀರಾಂಜನೇಯ ಸಭಾ ಮಂಟಪ, ಕುಂಬಳೆ, ಕಾಸರಗೋಡು. ♣

# ನಿಮ್ಮ ಬರಹ ನಮ್ಮ ಓದು...

**ಧರ್ಮಭಾರತಿ ಸಂಪಾದಕ ಸಂಸ್ಕೃತ ವಿದ್ವಾನ್ ಜಗದೀಶ ಶರ್ಮ, ಯಕ್ಷಗಾನ ಕಲಾವಿದ ತಾರಾನಾಥ ವರ್ಕಾಡಿ, ಪುತ್ತೂರಿನ ನೃತ್ಯ ವಿದ್ವಾನ್ ಕುದ್ಕಾಡಿ ವಿಶ್ವನಾಥ ರೈ, ಉಡುಪಿಯ ರಾಜಶೇಖರ ಹಂದೆ ಈ ಸಾಲಿನ ಸದಸ್ಯರಾಗಿದ್ದಾರೆ. ಶತಾವಧಾನಿ ಡಾ. ಆರ್. ಗಣೇಶ್ ಮತ್ತು ಮಂಗಳೂರಿನ ಕಲಾಸಹೃದಯಿ ಶ್ರೀನಿವಾಸ ದೇಶಪಾಂಡೆ, ಕಾಸರಗೋಡಿನ ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, ವಿದ್ವಾನ್ ಜಗದೀಶ ಶರ್ಮ–ಇವರು ಮಂಜೀರ ಮತ್ತು ಲೇಖನಗಳ ಶೈಲಿಯನ್ನು ಮೆಚ್ಚಿ ಪ್ರತಿಕ್ರಿಯಿಸಿದ್ದಾರೆ.**

**ನೂ**ಪುರದಲ್ಲಿ ಬರುವ ಲೇಖನಗಳು ಮನಮುಟ್ಟುವ ಸರಳ ಶೈಲಿಯಲ್ಲಿವೆ. ಲಲಿತ ಲಹರಿಯಲ್ಲಿ ಉದ್ಯಾವರ ಮಾಧವ ಆಚಾರ್ಯರ ಸೀತೆಯ ಸ್ವಗತ–ಪರಿಕಲ್ಪನೆ, ಸಾಹಿತ್ಯ–ಸಂಯೋಜನೆಯು ತುಂಬಾ ಸಂತೋಷ ಕೊಟ್ಟಿತು. ರಂಗಸ್ಥಳದಲ್ಲಿ ಅಳಿಕೆ ರಾಮಯ್ಯರ ನೆನಪು ಒಳ್ಳೆಯದಿತ್ತು. ಅವರ ವೇಷಗಳನ್ನು ನೋಡಿರುವ ನನಗೆ ಯಕ್ಷಗಾನ ತೆಂಕುತಿಟ್ಟಿನ ಗತಕಾಲದ ವೈಭವ ಮತ್ತೆ ಮತ್ತೆ ನೆನಪಾಯಿತು. ನಿಮ್ಮ ಸಂಪಾದಕ ಮಂಡಳಿಗೆ ಕೃತಜ್ಞತೆಗಳು.

**– ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ,**
**ಹಿರಿಯ ಯಕ್ಷಗಾನ ಅರ್ಥಧಾರಿಗಳು, ಬೆಳ್ತಂಗಡಿ.**

****

**ಉ**ತ್ತಮ ನೃತ್ಯ ಕಾರ್ಯಕ್ರಮ ಯಾವುದು, ಹೇಗಿರಬೇಕೆಂಬುದು ಸಂಪಾದಕೀಯದಲ್ಲಿ ಪ್ರೀತಿಪೂರ್ವಕವಾಗಿ ತಿಳಿಸಿದ್ದೀರಿ. ಎಲ್ಲಾ ಅಂಕಣಗಳು ಉತ್ತಮವಾಗಿವೆ. ಕಲೆ, ಸಾಹಿತ್ಯ, ಭರತ ಸಂಸ್ಕೃತಿಯ ವಿವಿಧ ಮಜಲುಗಳ ವಿವರ ಹೀಗೆಯೇ ಚೆನ್ನಾಗಿ ಮೂಡಿಬರುತ್ತಿರಲಿ. ಭಾರತಮಾತೆಯ ಸರ್ವಾಂಗಸುಂದರಿಯಾಗಿ ನೂಪುರ ಸುಶೋಭಿಸಲಿ.

**–ವಿದ್ವಾನ್ ಕುದ್ಕಾಡಿ ವಿಶ್ವನಾಥ ರೈ, 'ವಿಶ್ವಕಲಾನಿಕೇತನ', ಪುತ್ತೂರು.**

## ನಮ್ಮ ಬಳಗದಲ್ಲಿ......

- **ದತ್ತಾತ್ರೇಯ ಹೊಸಬಾಳೆ, ಹಿರಿಯ ಸಾಮಾಜಿಕ ಕಾರ್ಯಕರ್ತರು, ಪಾಟ್ನಾ.**
- **ಡಾ. ಕರುಣಾ ವಿಜಯೇಂದ್ರ, ನೃತ್ಯ ಉಪನ್ಯಾಸಕರು ಮತ್ತು ಸಂಶೋಧಕರು, ಬೆಂಗಳೂರು.**

# ನೂಪುರ ಭ್ರಮರಿಯಿಂದ ನೃತ್ಯ ವಿಮರ್ಶಕರಿಗಾಗಿ ರಾಜ್ಯಮಟ್ಟದ 'ವರ್ಷದ ಶ್ರೇಷ್ಠ ನೃತ್ಯ ವಿಮರ್ಶೆ' ಸ್ಪರ್ಧೆ

ನಮ್ಮ 'ನೂಪುರ ಭ್ರಮರಿ' ನೃತ್ಯಕ್ಷೇತ್ರದ ವಿಮರ್ಶಕರನ್ನು ಗುರುತಿಸುವ, ಗೌರವಿಸುವ ಮತ್ತು ವಿಮರ್ಶೆಯ ಕ್ಷೇತ್ರದ ಜವಾಬ್ದಾರಿಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಸಾಲಿನಿಂದ ರಾಜ್ಯಮಟ್ಟದ 'ವರ್ಷದ ಶ್ರೇಷ್ಠ ನೃತ್ಯ ವಿಮರ್ಶೆ' ಸ್ಪರ್ಧೆಯನ್ನು ಆಯೋಜಿಸಿದೆ. ಈಗಾಗಲೇ 2010ನೇ ಸಾಲಿನಲ್ಲಿ (ಜನವರಿ–ಡಿಸೆಂಬರ್) ರಾಜ್ಯದ ಕನ್ನಡ/ಇಂಗ್ಲೀಷ್ ಪತ್ರಿಕೆಗಳು/ನಿಯತಕಾಲಿಕೆಗಳಲ್ಲಿ ಪ್ರಕಟವಾದ ನೃತ್ಯ/ನಾಟ್ಯ ಸಂಬಂಧೀ ಪ್ರದರ್ಶನ/ ರಂಗಪ್ರವೇಶ/ ಸಮ್ಮೇಳನ/ಉತ್ಸವಗಳ ಕುರಿತ ವಿಮರ್ಶೆಗಳನ್ನು ಕಳಿಸಬಹುದಾಗಿದೆ. ಓರ್ವ ಲೇಖಕ ತಲಾ 3 ವಿಮರ್ಶೆಗಳನ್ನು ಕಳುಹಿಸಲು ಅವಕಾಶವಿದ್ದು; ಪ್ರತ್ಯೇಕ ಹಾಳೆಯಲ್ಲಿ ಸ್ವವಿವರ ಮತ್ತು ವಿಮರ್ಶೆಯ ವಿವರಗಳನ್ನು ಬರೆದು ಲಗತ್ತಿಸಬೇಕು. ತೀರ್ಪುಗಾರರ ನಿರ್ಧಾರ ಅಂತಿಮವಾಗಿರುತ್ತದೆ. ಒಂದುವೇಳೆ ಸೂಕ್ತವೆನಿಸುವ ಪ್ರವೇಶಗಳು ಬಾರದೇ ಹೋದಲ್ಲಿ ಪ್ರಶಸ್ತಿಯ ಗುಣಮಟ್ಟದ ದೃಷ್ಟಿಯಿಂದ ಸ್ಪರ್ಧೆಯನ್ನು ರದ್ದು ಮಾಡುವ ಅಧಿಕಾರ ತೀರ್ಪುಗಾರರಿಗಿರುತ್ತದೆ.

ಲೇಖಕರು ತಮ್ಮ ಅತ್ಯುತ್ತಮವೆನಿಸುವ ಪ್ರಕಟಿತ ಮೂರು (ಗರಿಷ್ಟ) ವಿಮರ್ಶೆಗಳನ್ನು ಅಥವಾ ಅದರ ಜೆರಾಕ್ಸ್ ಪ್ರತಿಯನ್ನು ಅಂಚೆ ಅಥವಾ ಈ ಮೈಲ್ ಮೂಲಕ ಜನವರಿ 5, 2011 ರ ಒಳಗೆ ತಲುಪುವಂತೆ ಕಳುಹಿಸಬೇಕು. ಜನವರಿ 5 ಕೊನೆಯ ದಿನ. ಅತ್ಯುತ್ತಮನಿಸುವ ವಿಮರ್ಶೆಗೆ ಫೆಬ್ರವರಿ 13, 2011ರಂದು ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿಪ್ರದಾನ ಮಾಡಲಾಗುವುದು. ಪ್ರಶಸ್ತಿಯು ಸನ್ಮಾನಪತ್ರ, ಫಲಕ, ನಗದು ಮತ್ತು ಫಲತಾಂಬೂಲಗಳನ್ನು ಒಳಗೊಂಡಿರುತ್ತದೆ.

*ಪ್ರವೇಶಗಳನ್ನು ಕಳುಹಿಸಬೇಕಾದ ವಿಳಾಸ:*

**ಮನೋರಮಾ ಬಿ.ಎನ್.**
**ಸಂಪಾದಕರು, 'ನೂಪುರ ಭ್ರಮರಿ'**
**ನಂ.104, ಕೌಶಲ್ ರೀಜೆನ್ಸಿ**
**1ನೇಅಡ್ಡರಸ್ತೆ, ಪ್ರಕಾಶ್ ನಗರ, ರಾಜಾಜಿನಗರ,**
**ಬೆಂಗಳೂರು 560085**
**ದೂರವಾಣಿ: 9964140927, 9481765544**
**ಈ ಮೈಲ್: editor@noopurabhramari.com**
**ಹೆಚ್ಚಿನ ಮಾಹಿತಿಗೆ www.noopurabhramari.com ಸಂಪರ್ಕಿಸಬಹುದು.**

## ರಂಗ-ಭ್ರಮರಿ

# ಭರತ ಪುತ್ರರು

**ನಾಟ್ಯಶಾಸ್ತ್ರವನ್ನು ರಚಿಸಿ ಭಾರತೀಯ ನಾಟ್ಯ ಪರಂಪರೆಯ ಪಿತಾಮಹನೆನಿಸಿಕೊಂಡ ಭರತಮುನಿ ಬ್ರಹ್ಮನ ಆಣತಿಯಂತೆ ತನ್ನ ನೂರು ಮಕ್ಕಳಿಗೆ ನಾಟ್ಯವೇದವನ್ನು ಕಲಿಸಿ ಪ್ರಯೋಗಿಸಿದನೆಂದು ಮೊದಲನೇ ಅಧ್ಯಾಯ ನಾಟ್ಯೋತ್ಪತ್ತಿಯಲ್ಲಿ ಕಂಡುಬರುವ ಐತಿಹ್ಯ. ಅಂದಹಾಗೆ ಆ ನೂರು ಮಕ್ಕಳು ಯಾರು ಎಂಬ ಕುತೂಹಲವೇ? ಹಾಗಾದರೆ ಇಲ್ಲಿದೆ ನಿಮ್ಮ ಓದಿಗೆ..**

ಶಾಂಡಿಲ್ಯ, ವಾತ್ಸ್ಯ, ಕೋಹಿಲ, ದತ್ತಿಲ, ಜಟಿಲ, ಅಂಬಷ್ಠಕ, ತಂಡು, ಅಗ್ನಿಶಿಖ, ಸೈಂಧವ, ಪುಲೋಮಾನ್, ಶಾಡ್ವಲಿ, ವಿಪುಲ, ಕಪಿಂಜಲ, ಬಾದರಿ, ಯಮ, ಧೂಮ್ರಾಯಣ, ಜಂಬುಧ್ವಜ, ಕಾಕಜಂಘ, ಸ್ವರ್ಣಕ, ತಾಪಸ, ಕೇದಾರಿ, ಶಾಲಿಕರ್ಣ, ದೀರ್ಘಗಾತ್ರ, ಶಾಲಿಕ, ಕೌತ್ಸ, ತಾಂಡಾಯನಿ, ಪಿಂಗಲ, ಚಿತ್ರಕ, ಬಂಧುಲ, ಭಲ್ಲಕ, ಮುಷ್ಟಿಕ, ಸೈಂಧವಾಯನ, ತೈತಿಲ, ಭಾರ್ಗವ, ಶುಚಿ, ಬಹುಲ, ಅಬುಧ, ಬುಧಸೇನ, ಪಾಂಡುಕರ್ಣ, ಕೇರಲ, ಋಜುಕ, ಮಂಡಕ, ಶಂಬರ, ವಂಜುಲ, ಮಾಗಧ, ಸರಲ, ಕರ್ತ್ತಾರ, ಉಗ್ರ, ತುಷಾರ, ಪಾರ್ಷದ, ಗೌತಮ, ಬಾದರಾಯಣ, ವಿಶಾಲ, ಶಬಲ, ಸುನಾಭ, ಮೇಷ, ಕಾಲಿಯ, ಭ್ರಮರ, ಪೀಠಮುಖ, ನಖಕುಟ್ಟ, ಅಶ್ಮಕುಟ್ಟ, ಷಟ್ಪದ, ಉತ್ತಮ, ಪಾದುಕ, ಉಪಾನಹ, ಶ್ರುತಿ, ಚೌಷಸ್ವರ, ಅಗ್ನಿಕುಂಡ, ಆಜ್ಯಕುಂಡ, ವಿತಾಂಡ್ಯ, ತಾಂಡ್ಯ, ಕರ್ತರಾಕ್ಷ, ಹಿರಣ್ಯಾಕ್ಷ, ಕುಶಲ, ದುಸ್ಸಹ, ಲಾಜ, ಭಯಾನಕ, ಬೀಭತ್ಸ, ವಿಚಕ್ಷಣ, ಪುಂಡ್ರಾಕ್ಷ, ಪುಂಡ್ರಾನಾಸ, ಅಸಿತ, ಸಿತ, ವಿದ್ಯುಜ್ಜಿಹ್ವ, ಮಹಾಜಿಹ್ವ, ಶಾಲಂಕಾಯನ, ಶ್ಯಾಮಾಯನ, ಮಾಠರ, ಲೋಹಿತಾಂಗ, ಸಂವರ್ತಕ, ಪಂಚಶಿಖ, ತ್ರಿಶಿಖ, ಶಿಖ, ಶಂಕುವರ್ಣಮುಖ, ಷಂಡ, ಶಂಕುಕರ್ಣ, ಶಕ್ರನೇಮಿ, ಗಭಸ್ತಿ , ಅಂಶುಮಾಲಿ, ಶಠ, ವಿದ್ಯುತ್, ಶಾಂತಜಂಘ, ರೌದ್ರ, ವೀರ– ಹೀಗೆ ಈ ನೂರುಜನ ಮಕ್ಕಳಲ್ಲಿ ಯಾವನು ಯಾವುದಕ್ಕೆ ಯೋಗ್ಯನೋ ಎಂಬುದನ್ನು ನೋಡಿ ಅವರವರಿಗೆ ಪಾತ್ರಗಳನ್ನು ಹಂಚಿ ನಾಟ್ಯವೇದವನ್ನು ಭರತನು ಪ್ರಯೋಗಿಸಿದನು.

ಆದರೆ ಈ ನೂರು ಜನ ಮಕ್ಕಳ ಕಲ್ಪನೆ ಅಸಂಗತವೆನ್ನಿಸಿ ಯಾರೋ ಲಾಕ್ಷಣಿಕ ಇವರೆಲ್ಲಾ ಭರತಮುನಿಯ ಶಿಷ್ಯರೇ ಹೊರತು ಮಕ್ಕಳಲ್ಲ ಎಂಬ ಬದಲಾವಣೆಯನ್ನು ಮಾಡಿದ್ದಾನೆ. ಅಂದಹಾಗೆ ಸರಿಯಾಗಿ ಲೆಕ್ಕ ಹಾಕಿ ನೋಡಿ, 104 ಹೆಸರುಗಳು ಪಟ್ಟಿಯಲ್ಲಿ ಕಂಡುಬರುತ್ತವೆ. ಅವುಗಳ ಪೈಕಿ ಪುರಾಣ ಗಳಲ್ಲಿ ಪ್ರಸ್ತಾಪಿಸಲಾದ ದೇವತೆ, ರಾಕ್ಷಸ, ಮುನಿ, ಗಣಗಳ ಹೆಸರುಗಳೂ ಕಂಡುಬರುತ್ತವೆ. ಜೊತೆಗೆ ಭಯಾನಕ, ಬೀಭತ್ಸ, ರೌದ್ರ ಮತ್ತು ವೀರ ಎಂಬ ನಾಲ್ಕು ರಸಗಳ ಹೆಸರುಗಳೂ ಕಂಡುಬಂದಿವೆ. ಇದಲ್ಲದೆ ದತ್ತಿಲ,

ಕೋಹಿಲ, ಶಾಂಡಿಲ್ಯ–ಇವರುಗಳು ನಾಟ್ಯವೇದವನ್ನು ಭೂಲೋಕಕ್ಕೆ ತಂದರು ಎಂದು ನಾಟ್ಯಶಾಸ್ತ್ರದ ಕೊನೆಯ ಅಧ್ಯಾಯದಲ್ಲಿ ಹೇಳಲಾಗಿದೆ. ಈ ನೂರು ಜನ ಮಕ್ಕಳೇ ನಂತರ ನಾಟ್ಯವನ್ನು ಹೀನಾಯವಾಗಿ ಕಂಡು ಪ್ರಯೋಗಿಸಿದ್ದರಿಂದ ಅವರು ಶಾಪಗ್ರಸ್ಥರಾಗಿ ಭೂಮಿಗೆ ಬಿದ್ದು ಭೂಮಿಯಲ್ಲಿ ನಾಟ್ಯದ ಉತ್ಪತ್ತಿಗೆ ಕಾರಣವಾದರೆಂಬ ಉಲ್ಲೇಖವಿದೆ.

ಅಂತೆಯೇ ನಾಟ್ಯವೇದದ ಪ್ರಯೋಗಕ್ಕೆ ಲಲಿತವಾದ ಅಂಗೋಪಾಂಗ ಭಂಗಿಗಳು, ಶೃಂಗಾರರಸದ ಅಭಿವ್ಯಕ್ತಿ ಬೇಕಾದ್ದರಿಂದ ಸ್ತ್ರೀಯರ ಅಗತ್ಯ ನಾಟ್ಯಕ್ಕೆ ಇತ್ತು. ಹಾಗಾಗಿ ಬ್ರಹ್ಮನು ಕೈಶಿಕೀ ವೃತ್ತಿಯಲ್ಲಿ ಚತುರರಾದ ಮಂಜುಕೇಶೀ, ಸುಕೇಶೀ, ಮಿಶ್ರಕೇಶೀ, ಸುಲೋಚನಾ, ಸೌದಾಮಿನೀ, ದೇವದತ್ತಾ, ದೇವಸೇನಾ, ಮನೋರಮಾ, ಸುದತೀ, ಸುಂದರೀ, ವಿದಗ್ಧಾ, ವಿಬುಧಾ, ಸುಮಾಲಾ, ಸಂತತಿ, ಸುನಂದ, ಸುಮುಖೀ, ಮಾಗಧೀ, ಅರ್ಜುನೀ, ಸರಲಾ, ಕೇರಲಾ, ಧೃತಿ, ನಂದಾ, ಪುಷ್ಕಲಾ ಮತ್ತು ಕಲಭಾ ಎಂಬುವರನ್ನು ಮಾನಸೀ ಸೃಷ್ಟಿಯಿಂದ ಹುಟ್ಟಿಸಿ ಭರತನಿಗೆ ಕೊಟ್ಟನಂತೆ ! ಅದರಂತೆಯೇ ವಾದ್ಯ ಮೇಳಗಳಿಗಾಗಿ ಸ್ವಾತಿ ಮತ್ತು ಅವನ ಶಿಷ್ಯರು, ಹಾಗೂ ಗಾಯನಕ್ಕೆ ನಾರದ, ಗಂಧರ್ವರು ನೇಮಿಸಲ್ಪಟ್ಟರು ಎನ್ನುತ್ತದೆ ನಾಟ್ಯಶಾಸ್ತ್ರ. ✳

## ಇದೋ, ನಿಮಗೆ ಪ್ರೀತಿಪೂರ್ವಕ ವೈಯಕ್ತಿಕ ಆಹ್ವಾನ

ನೂಪುರ ಭ್ರಮರಿ 2011ರ ಫೆಬ್ರವರಿಗೆ 5ನೇ ವರ್ಷಕ್ಕೆ ಅಡಿಯಿಡುತ್ತಿದೆ. ಈ ಸಂದರ್ಭವನ್ನು ನಿಮ್ಮೆಲ್ಲರ ಉಪಸ್ಥಿತಿಯಲ್ಲಿ ಸಂಭ್ರಮಿಸಬೇಕೆಂದಿದ್ದೇವೆ. ಆ ಪ್ರಯುಕ್ತ ಫೆಬ್ರವರಿ 13, 4.30ಕ್ಕೆ ಭಾನುವಾರ ಬೆಂಗಳೂರಿನ ನಯನ ಸಭಾಂಗಣದಲ್ಲಿ ಸಮಾರಂಭವನ್ನು ಆಯೋಜಿಸುವ ಹರುಷ. ಅಂದು ನಮ್ಮದೇ ಬಳಗದ ಮತ್ತೊಂದು ಪತ್ರಿಕೆ 'ಚೈತ್ರರಶ್ಮಿ'ಯೂ ಜೊತೆಯಾಗಲಿದ್ದಾಳೆ. ಶತಾವಧಾನಿ ಡಾ. ಆರ್. ಗಣೇಶ್ ಅಂದಿನ ಮುಖ್ಯ ಅತಿಥಿಯಾಗಿ ನಮ್ಮನ್ನು ಮುನ್ನಡೆಸಲಿದ್ದಾರೆ. ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ, ವಿಶೇಷ ಸಂಚಿಕೆ ಅನಾವರಣ... ಹೀಗೆ ಭ್ರಮರಿಯ ನಡೆಗೆ ಹಲವು ನೂಪುರ ನಾದ. ನೂಪುರದ ಆತ್ಮೀಯರು ನೀವು. ನಿಮ್ಮ ಬರುವಿಕೆಯನ್ನು ಕಾತರದಿಂದ ನೋಡುತ್ತೇವೆ. ಬರುತ್ತೀರಲ್ಲಾ!

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

## ಚಂದಾ ವಿವರ

**ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು-ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ. ಕಳಿಸುವುದು ಉತ್ತಮ.**

**ಚೆಕ್ ಕಳಿಸುವುದಿದ್ದಲ್ಲಿ ಕಮಿಷನ್ ಮೊತ್ತ 40/- ರೂ ಸೇರಿಸಿ ಕಳಿಸುವುದು. ಸಹಕರಿಸಿ.**

| | | |
|---|---|---|
| **ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ)** | : | **ರೂ. 100/-** |
| **ಪೋಷಕ** | : | **ರೂ. 1,000/-** |
| **ಮುದ್ರಣ ನಿಧಿ ( ಮಹಾಪೋಷಕ)** | : | **ರೂ. 3,500/-** |

**ನೂಪುರ ಭ್ರಮರಿಯ ಈ ಸಂಚಿಕೆ ನಿಮಗೆ ಉಚಿತ/ ಗೌರವ/ 2010ನೇ ಸದಸ್ಯ/ ಪೋಷಕ / ಮಹಾಪೋಷಕ ಪ್ರತಿಯಾಗಿರುತ್ತದೆ. ನಿಮ್ಮ ಸದಸ್ಯತ್ವದ ನವೀಕರಣ /ಶಾಶ್ವತ /.............................................ದಂದು ಮಾಡಬೇಕಾಗಿರುತ್ತದೆ.**

# ಮುದ್ರಾರ್ಣವ

**ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ– ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಸಂಶೋಧನಾ ಕೃತಿ.**

**ಬೆಲೆ : 250/- ರೂ. ಸಂಪರ್ಕಿಸಿ. 99641 40927**

---

**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)
**ಎನ್. ರಾಮ ಭಟ್,** ಉಡುಪಿ (ಮೊಬೈಲ್ : 94495 92970)
**ಸಿ. ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)
**ಪ್ರೊ. ವೆಂಕಟೇಶ್ ಪೈ,** ಮುಂಬೈ. ( ಮೊಬೈಲ್ : 098699 21397)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

---

**ನೂಪುರ ಭ್ರಮರಿಯ ಬಳಗವು**

**ಭರತನಾಟ್ಯ ಮತ್ತು ನೃತ್ಯ ಶೈಲಿಗಳಿಗೆ ಸಂಬಂಧಿಸಿದಂತೆ ಅರಿವಿನ ವಿಸ್ತರಣೆಗಾಗಿ**

1. ಭಾರತೀಯ ಶಾಸ್ತ್ರೀಯ ನೃತ್ಯಗಳು ಮತ್ತು ಜೀವನಾನುಸಂಧಾನ
2. ಭರತನಾಟ್ಯದ ಆಂಗಿಕಾಭಿನಯ
3. ನಾಯಿಕಾ–ನಾಯಕಾ ಭಾವ
4. ಹಸ್ತಮುದ್ರಾ ವಿನ್ಯಾಸಗಳು ಮತ್ತು ಸಂಶೋಧನೆ
5. ನೃತ್ಯ ಇತಿಹಾಸ ಮತ್ತು ಪುನರುತ್ಥಾನ
6. ನೃತ್ಯ ಗ್ರಂಥಗಳು ಮತ್ತು ಅವುಗಳೆಡೆಗೆ ಸಮಗ್ರ ದೃಷ್ಟಿ

**ಮೇಲ್ಕಂಡ ವಿಚಾರಗಳನ್ನು ಒಳಗೊಂಡಂತೆ ವಿವಿಧ ವಿಷಯಗಳಲ್ಲಿ ಉಪನ್ಯಾಸ–ಪ್ರಾತ್ಯಕ್ಷಿಕೆಗಳನ್ನು ನೀಡುತ್ತಾ ಬಂದಿದ್ದು ; ಕಾರ್ಯಕ್ರಮಗಳಿಗಾಗಿ ಆಸಕ್ತರು /ಸಂಸ್ಥೆಗಳು ಪತ್ರಿಕೆಯ ಸಂಪಾದಕರನ್ನು ಸಂಪರ್ಕಿಸಬಹುದು. ದೂ : 99641 40927**




If not delivered please return to :
ನೂಪುರ ಭ್ರಮರಿ
'ಸಾನ್ನಿಧ್ಯ' ಪ್ರಕಾಶನ
ದೇಚೂರು ರಸ್ತೆ,
ಅಶ್ವತ್ಥಕಟ್ಟೆ ಸಮೀಪ
ಮಡಿಕೇರಿ, ಕೊಡಗು- 571201

ಫೋನ್ ನಂ : 9964140927
ವೆಬ್ ಸೈಟ್ :
www.noopurabhramari.com
ಈ ಮೈಲ್ ವಿಳಾಸ :
feedback@noopurabhramari.com
editor@ noopurabhramari.com